# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜನವರಿ 20, 2025

ಸಂಪುಟ : 51 ಸಂಚಿಕೆ : 248 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





ದಾವಣಗೆರೆ ಶಿವಯೋಗಿ ಮಂದಿರದ ಆವರಣದಲ್ಲಿ ಭಾನುವಾರ ಸಂಜೆ ನಡೆದ ಚಿರಂತನ ಉತ್ಸವ'ದಲ್ಲಿ ಮಕ್ಕಳು ನೃತ್ಯರೂಪಕ ಪ್ರದರ್ಶಿಸಿದರು.

# ದಾವೋಸ್‌ನತ್ತ ದೇಶದ ಚಿತ್ತ

## ಡಬ್ಲ್ಯೂ.ಇ.ಎಫ್. ಸಭೆ: ಹೂಡಿಕೆ ಆಕರ್ಷಣೆಗಾಗಿ ಈ ಬಾರಿ ಅತಿ ದೊಡ್ಡ ತಂಡ

ದಾವೋಸ್, ಜ. 19- ಸೋಮವಾರದಿಂದ ವಿಶ್ವ ಆರ್ಥಿಕ ವೇದಿಕೆಯ (ಡಬ್ಲ್ಯೂ.ಇ.ಎಫ್.) ವಾರ್ಷಿಕ ಸಭೆ ಆರಂಭವಾಗಲಿದ್ದು ಇದರಲ್ಲಿ ಭಾರತದ ವಿವಿಧತೆಯಲ್ಲಿನ ಐಕ್ಯತೆ ಪ್ರದರ್ಶನವಾಗಲಿದೆ. ಈ ಬಾರಿ ಭಾರತ ತನ್ನ ಅತಿ ದೊಡ್ಡ ತಂಡವನ್ನು ಕಳಿಸಿದೆ.

ಈ ತಂಡದಲ್ಲಿ ಐವರು ಕೇಂದ್ರ ಸಚಿವರು, ಮುಖ್ಯಮಂತ್ರಿಗಳು ಹಾಗೂ ಹಲವು ರಾಜ್ಯಗಳ ಸಚಿವರಿದ್ದಾರೆ. ಐದು ದಿನಗಳ ಕಾಲ ನಡೆಯಲಿರುವ ಸಭೆಯಲ್ಲಿ ಇವರು ನೂರಕ್ಕೂ ಹೆಚ್ಚು ಕಂಪನಿಗಳ ಮುಖ್ಯಸ್ಥರು ಹಾಗೂ ಇತರೆ ನಾಯಕರನ್ನು ಭೇಟಿ ಮಾಡಲಿದ್ದಾರೆ. ಹೂಡಿಕೆ ಸೆಳೆಯುವ ಪ್ರಯತ್ನ ಮಾಡಲಿದ್ದಾರೆ.

ಈ ಬಗ್ಗೆ ಮಾತನಾಡಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಡಬ್ಲ್ಯೂ.ಇ. ಎಫ್. ವಾರ್ಷಿಕ ಸಭೆಯಲ್ಲಿ ಒಳಗೊಳ್ಳುವಿಕೆಯ ಬೆಳವಣಿಗೆ, ಸಾಮಾಜಿಕ ಹೂಡಿಕೆ, ಭೌತಿಕ ಹೂಡಿಕೆ, ಡಿಜಿಟಲ್ ಮೂಲಭೂತ ಸೌಲಭ್ಯ ಮತ್ತು ತಂತ್ರಜ್ಞಾನದ ಪ್ರಜಾಪ್ರಭುತ್ವಗೊಳಿಸುವ ಕುರಿತು ಹೆಚ್ಚು ಒತ್ತು ನೀಡಲಾಗುವುದು ಎಂದಿದ್ದಾರೆ.

**ಐದು ದಿನಗಳ ಕಾಲ ನಡೆಯುವ ಸಭೆಯಲ್ಲಿ ಐವರು ಕೇಂದ್ರ ಸಚಿವರು ಮುಖ್ಯಮಂತ್ರಿಗಳು ಹಾಗೂ ಹಲವು ರಾಜ್ಯಗಳ ಸಚಿವರು, ನೂರಕ್ಕೂ ಹೆಚ್ಚು ಕಂಪನಿ ಮುಖ್ಯಸ್ಥರು ಭಾಗಿ.**

ಸಭೆಯಲ್ಲಿ ಕೇಂದ್ರ ಸಚಿವರಾದ ಸಿ.ಆರ್. ಪಾಟೀಲ್, ಚಿರಾಗ್ ಪಾಸ್ವಾನ್, ಜಯಂತ್ ಚೌಧರಿ, ಕೆ. ರಾಮಮೋಹನ ನಾಯ್ಡು ಅವರೂ ಸಹ ಉಪಸ್ಥಿತರಿರಲಿದ್ದಾರೆ.

ಈ ಸಭೆಯಲ್ಲಿ ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣಗಳ ಮುಖ್ಯಮಂತ್ರಿಗಳಾದ ದೇವೇಂದ್ರ ಫಡ್ನವೀಸ್, ಎನ್. ಚಂದ್ರಬಾಬು ನಾಯ್ಡು ಹಾಗೂ ರೇವಂತ್ ರೆಡ್ಡಿ ಭಾಗವಹಿಸಲಿದ್ದಾರೆ.

ಇವರ ಜೊತೆಗೆ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ತಮಿಳುನಾಡಿನ ಟಿ.ಆರ್.ಬಿ. ರಾಜ, ಕೇರಳದ ಪಿ. ರಾಜೀವ್ ಸಹ ಉಪಸ್ಥಿತರಿರಲಿದ್ದಾರೆ.

ವಾರ್ಷಿಕ ಶೃಂಗ ಸಭೆಯಲ್ಲಿ ಸುಮಾರು ಏಳು ಲಕ್ಷ ಕೋಟಿ ರೂ.ಗಳ ಒಡಂಬಡಿಕೆಗೆ ಸಹಿ ಹಾಕಲು ಮಹಾರಾಷ್ಟ್ರ ಸರ್ಕಾರ ಗುರಿ ಹೊಂದಿದೆ. ತೆಲಂಗಾಣದ ಮುಖ್ಯಮಂತ್ರಿ ರೆಡ್ಡಿ ಹಾಗೂ ಅವರ ಸಂಪುಟದ ಸಚಿವರಾದ ಡಿ. ಶ್ರೀಧರ ಬಾಬು ಹಾಗೂ ಹಿರಿಯ ಅಧಿಕಾರಿಗಳು ತಮ್ಮ ರಾಜ್ಯದ ಹೂಡಿಕೆ ಪಾಲಿಗಾಗಿ ಶ್ರಮಿಸಲಿದ್ದಾರೆ.

ಆಂಧ್ರಪ್ರದೇಶ, ತಮಿಳುನಾಡು, ಉತ್ತರ ಪ್ರದೇಶ ಹಾಗೂ ಇತರೆ ರಾಜ್ಯಗಳ ಪ್ರತಿನಿಧಿಗಳೂ ಸಹ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಕೇಂದ್ರದ ಸಚಿವರು ಹಾಗೂ ಉನ್ನತ ಅಧಿಕಾರಿಗಳು ಭಾರತದ ಹೂಡಿಕೆ ಆಕರ್ಷಣೆ ಕುರಿತು ವಿವರಗಳನ್ನು ನೀಡಲಿದ್ದಾರೆ.

2025ರಲ್ಲಿ ಜಾಗತಿಕ ಆರ್ಥಿಕ ಪರಿಸ್ಥಿತಿ ದುರ್ಬಲವಾಗಿರುವ ಸಾಧ್ಯತೆ (2ನೇ ಪುಟಕ್ಕೆ)

# ನೃತ್ಯ, ಸಂಗೀತಾಭ್ಯಾಸ ಅಂಕ ಗಳಿಕೆಗೆ ಪೂರಕ

## 'ಚಿರಂತನ ಉತ್ಸವ'ದಲ್ಲಿ ಖ್ಯಾತ ವೀಣಾವಾದಕಿ ರೇವತಿ ಕಾಮತ್ ಪ್ರತಿಪಾದನೆ

ದಾವಣಗೆರೆ, ಜ. 19- ನೃತ್ಯ, ಸಂಗೀತ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳು ಶಾಲಾ ಕಲಿಕೆಗೆ ಪೂರಕವೇ ಹೊರತು, ಮಾರಕವಲ್ಲ ಎಂದು ಖ್ಯಾತ ವೀಣಾ ವಾದಕಿ, ಕರ್ನಾಟಕ ಕಲಾಶ್ರೀ ರೇವತಿ ಕಾಮತ್ ಪ್ರತಿಪಾದಿಸಿದರು.

ಚಿರಂತನ ಅಕಾಡೆಮಿ ವತಿಯಿಂದ ನಗರದ ಶಿವಯೋಗಿ ಮಂದಿರದ ಆವರಣದಲ್ಲಿ ಭಾನುವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ 'ಚಿರಂತನ ಉತ್ಸವ'ದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳನ್ನು ಸಂಗೀತ ಅಥವಾ ನೃತ್ಯ ಶಾಲೆಗಳಿಗೆ ಕಳುಹಿಸಿದರೆ, ನಿತ್ಯದ ವಿದ್ಯಾಭ್ಯಾಸಕ್ಕೆ, ಅಂಕ ಗಳಿಕೆಗೆ ತೊಂದರೆಯಾಗುತ್ತದೆ ಎಂದು ಪೋಷಕರು ಭಾವಿಸುತ್ತಾರೆ. ಇದು ತಪ್ಪು. ಯಾವ ಕಾರಣಕ್ಕೂ ಸಾಂಸ್ಕೃತಿಕ ಚಟುವಟಿಕೆಗಳಿಂದ ಮಕ್ಕಳು ಹಿನ್ನಡೆ ಅನುಭವಿಸುವುದಿಲ್ಲ ಎಂದು ಹೇಳಿದರು.

### ಸಂಗೀತ ನೀಡುವ ತೃಪ್ತಿ ಹಣದಿಂದ ಸಿಗದು : ಪಿ.ಶೇಷಾದ್ರಿ

ಸಂಗೀತ ನೀಡುವ ಸಂತೋಷ, ತೃಪ್ತಿಯನ್ನು ಹಣ ನೀಡುವುದಿಲ್ಲ ಎಂದು ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಹೇಳಿದರು.

'ಚಿರಂತನ ಉತ್ಸವ'ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಂಗೀತ ಶುದ್ಧವಾದ ಕಲೆ. ಆ ಕಲೆಯನ್ನು ಮಕ್ಕಳಲ್ಲಿ ರಕ್ತಗತವಾಗಿಸಬೇಕು ಎಂದು ಹೇಳಿದರು.

ಕಲೆಯು ಶಾಂತಿ, ನೆಮ್ಮದಿ, ಅನುಭೂತಿ, ಆನಂದವನ್ನು ನೀಡುತ್ತದೆ. ಮಕ್ಕಳನ್ನು ಸಿನಿಮಾ, ಧಾರಾವಾಹಿಗೆ ಪ್ರೋತ್ಸಾಹಿಸಿದಂತೆ ನೃತ್ಯಕಲೆಗೂ ಪ್ರೋತ್ಸಾಹಿಸುವಂತೆ ಕರೆ ನೀಡಿದರು.

ದಾವಣಗೆರೆಗೂ ಸಿನಿಮಾ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧ. ಎಲ್ಲ ಶುಭ ಕಾರ್ಯಕ್ಕೂ ದಾವಣಗೆರೆಯನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಇಲ್ಲಿ ಪ್ರತಿಭಾವಂತ ಕಲಾವಿದರಿದ್ದಾರೆ ಎಂದರು.

ಮಕ್ಕಳನ್ನು ಶಾಲೆಗೆ ಕಳುಹಿಸುವ ಜೊತೆಗೆ ಒಂದಿಷ್ಟು ವೇಳೆ ನೃತ್ಯ ಅಥವಾ ಸಂಗೀತ ಕಲಿಸಲೂ ಸಹ ಸಮಯ ಮೀಸಲಿಡಿ. ಇದು ಕಲಿಕಾಸಕ್ತಿಯನ್ನೂ ಹೆಚ್ಚಿಸುತ್ತದೆ. ಭವಿಷ್ಯದಲ್ಲಿ ಮಕ್ಕಳು ಒತ್ತಡಕ್ಕೆ ಒಳಗಾಗುವುದು ತಪ್ಪುತ್ತದೆ. ಅಲ್ಲದೇ ಏಕಾಂತ ಕಾಡುವುದಿಲ್ಲ ಎಂದರು.

ಚಿರಂತನ ಸಂಸ್ಥೆ ಕೇವಲ ನೃತ್ಯ, ಸಂಗೀತ ಶಾಲೆಯಾಗಿ ಉಳಿಯದೆ, ಕಲಾ ಕೇಂದ್ರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಸಂಸ್ಥೆಗೆ ಸ್ಥಳೀಯರು ಪ್ರೋತ್ಸಾಹಿಸಬೇಕು ಎಂದು (2ನೇ ಪುಟಕ್ಕೆ)

# ಸರ್ಕಾರಿ ಶಾಲೆ ಸುಧಾರಣೆಗೆ 'ಶಿಕ್ಷಣ ಸುಧಾರಣಾ ಸಮಿತಿ'

ಬೆಂಗಳೂರು, ಜ.19- ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕೆ, ಮಾನವ ಸಂಪನ್ಮೂಲದ ಸಮರ್ಪಕ ಬಳಕೆ ಇತ್ಯಾದಿ ಅಂಶಗಳ ಕುರಿತು ಚರ್ಚಿಸಿ, ಸುಧಾರಣೆ ತರುವ ಉದ್ದೇಶದಿಂದ 'ತಾಲ್ಲೂಕು ಮಟ್ಟದ ಶಿಕ್ಷಣ ಸುಧಾರಣಾ ಸಮಿತಿ' ರಚಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

**ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರನ್ನು ಸಂಪರ್ಕಿಸಿ ಸಮಿತಿ ರಚಿಸುವಂತೆ ಡಿಡಿಪಿಐಗಳಿಗೆ ಶಿಕ್ಷಣ ಇಲಾಖೆ ಸೂಚನೆ**

ತಾಲ್ಲೂಕಿನಲ್ಲಿ ಎಲ್ಲ ಅರ್ಹ ಮಕ್ಕಳ ಶಾಲಾ ದಾಖಲಾತಿ, ಹಾಜರಾತಿ ಮತ್ತು ಮಕ್ಕಳ ಕಲಿಕಾ ಮಟ್ಟವನ್ನು ವೃದ್ಧಿಸುವುದು, ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣದವರೆಗೆ ಶಾಲೆ ಬಿಟ್ಟು ಹೋಗುವಿಕೆ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವುದು, ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಸಮುದಾಯದ ಪಾಲ್ಗೊಳ್ಳುವಿಕೆ, ಸಿಎಸ್‌ಆರ್ ಕಾರ್ಯಕ್ರಮದ ಮೂಲಕ ನೆರವು ಒದಗಿಸುವುದು ಈ ಸಮಿತಿಯ ಕಾರ್ಯವಾಗಿದೆ.

ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರನ್ನು ಸಂಪರ್ಕಿಸಿ ಈ ಸಮಿತಿ ರಚಿಸಬೇಕು ಎಂದು ಎಲ್ಲ ಉಪ ನಿರ್ದೇಶಕರಿಗೆ (ಆಡಳಿತ) ಶಾಲಾ (2ನೇ ಪುಟಕ್ಕೆ)

# ಮಹಿಳೆಯರಿಗೂ ಶಿಕ್ಷಣ ಇರಲಿ ಎಂದ ತಾಲಿಬಾನ್ ಮುಖಂಡ

ಕಾಬುಲ್, 17- ಅಫ್ಘಾನಿಸ್ತಾನದಲ್ಲಿ ಮಹಿಳೆಯರು ಮತ್ತು ಬಾಲಕಿಯರಿಗೆ ಶಿಕ್ಷಣ ನಿರಾಕರಿಸಬಾರದು ಎಂದು ತಾಲಿಬಾನ್ ಹಿರಿಯ ಮುಖಂಡರೊಬ್ಬರು ಹೇಳಿದ್ದಾರೆ. ಸರ್ಕಾರದ ನೀತಿಯನ್ನು ಬಹಿರಂಗವಾಗಿ ವಿರೋಧಿಸುವ ಅಪರೂಪದ ಪ್ರಕರಣ ಇದಾಗಿದೆ.

ವಿದೇಶಾಂಗ ಸಚಿವಾಲಯದ ಉಪನಾಯಕರಾಗಿರುವ ಶೇರ್ ಅಬ್ಬಾಸ್ ಸ್ಟಾನಿಕ್‌ಝುಲ್ ಅವರು, ಕೋಸ್ಟ್ ಪ್ರಾಂತ್ಯದಲ್ಲಿ ಮಾತನಾಡುವಾಗ ಈ ಹೇಳಿಕೆ ನೀಡಿದ್ದಾರೆ.

ಧಾರ್ಮಿಕ ಶಾಲೆಯ ಸಮಾರಂಭ ಒಂದರಲ್ಲಿ ಮಾತನಾಡಿದ ಅವರು, ಮಹಿಳೆಯರು ಹಾಗೂ ಬಾಲಕಿಯರಿಗೆ ಶಿಕ್ಷಣ ನಿರಾಕರಿಸುವುದಕ್ಕೆ ಯಾವುದೇ ಕಾರಣಗಳಿಲ್ಲ. ಈ ಹಿಂದೆಯೂ ಶಿಕ್ಷಣ ನಿರಾಕರಿಸುವುದಕ್ಕೆ ಕಾರಣ ಇರಲಿಲ್ಲ, ಈಗಲೂ ಸಹ ಯಾವುದೇ ಕಾರಣ ಇಲ್ಲ ಎಂದವರು ಹೇಳಿದ್ದಾರೆ.

ತಾಲಿಬಾನ್ ಸರ್ಕಾರ ಈ ಹಿಂದೆ ಆರನೇ ತರಗತಿ ನಂತರ ಬಾಲಕಿಯರ ಕಲಿಕೆಗೆ ತಡೆ ಹಾಕಿತ್ತು. ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಮಹಿಳೆಯರ ವೈದ್ಯಕೀಯ ತರಬೇತಿಗೂ ತಡೆ ಹಾಕಲಾಗಿದೆ ಎಂಬ (2ನೇ ಪುಟಕ್ಕೆ)

# ಮೋದಿ ಸರ್ಕಾರ ಉದ್ಯಮ ನಡೆಸುವುದನ್ನು ಕಠಿಣ ಮಾಡುತ್ತಿದೆ : ಕಾಂಗ್ರೆಸ್

ನವದೆಹಲಿ, ಜ. 19 - ಮೋದಿ ಸರ್ಕಾರದ ನೀತಿಗಳ ಕಾರಣದಿಂದಾಗಿ ಭಾರತದಲ್ಲಿ ಹೂಡಿಕೆದಾರರ ವಿಶ್ವಾಸ ಕುಸಿದಿದೆ. ಮೋದಿ ಸರ್ಕಾರ ಉದ್ಯಮ ನಡೆಸಲು ಸುಲಲಿತವಾಗಿದ್ದ ನೀತಿಗಳನ್ನು ಕಠಿಣಗೊಳಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಸರ್ಕಾರ ದಾಳಿಯ ಆಡಳಿತ ಹಾಗೂ ತೆರಿಗೆ ಉಗ್ರವಾದವನ್ನು ಅಂತ್ಯಗೊಳಿಸಬೇಕಿದೆ ಎಂದು ಕಾಂಗ್ರೆಸ್ ತಿಳಿಸಿದೆ.

ಉದ್ಯೋಗ ನೀಡುವ ಭಾರತದ ಉತ್ಪಾದನಾ ವಲಯವನ್ನು ರಕ್ಷಿಸಬೇಕಿದೆ ಹಾಗೂ ಖರೀದಿ ಶಕ್ತಿ ಹೆಚ್ಚಿಸಲು ನಿರ್ಣಾಯಕ ಕ್ರಮಗಳ ಅಗತ್ಯವಿದೆ ಎಂದು ಕಾಂಗ್ರೆಸ್ ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಮೋದಿ ಸರ್ಕಾರ ಉದ್ಯಮ ನಡೆಸುವುದನ್ನು ಸುಲಲಿತಗೊಳಿಸುವದಾಗಿ ಹೇಳಿತ್ತು. ಆದರೆ ಕಳೆದ ದಶಕದಲ್ಲಿ ಖಾಸಗಿ ಹೂಡಿಕೆ ದಾಖಲೆ ಮಟ್ಟಕ್ಕೆ ಕುಸಿದಿದೆ. ದೊಡ್ಡ ಸಂಖ್ಯೆಯಲ್ಲಿ ಭಾರತದ ಉದ್ಯಮಿಗಳು (2ನೇ ಪುಟಕ್ಕೆ)



# ಅಲೆಮಾರಿ ಸಮುದಾಯದ ಪ್ರಗತಿಗೆ ಕ್ರಮ ವಹಿಸಿ

ದಾವಣಗೆರೆ, ಜ.19- ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಅಲೆಮಾರಿ ಮತ್ತು ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ವಸತಿ ನಿಲಯ ಆರಂಭಿಸುವ ಜತೆಗೆ ಅಲೆಮಾರಿ ಸಮುದಾಯಗಳ ಸಮಗ್ರ ಪ್ರಗತಿಗೆ ಸರ್ಕಾರ ಕ್ರಮ ವಹಿಸಬೇಕು ಎಂದು ನೆಲಮಂಗಲದ ವನಕಲ್ಲು ಮಲ್ಲೇಶ್ವರ ಮಹಾಸಂಸ್ಥಾನ ಮಠದ ಬಸವ ರಮಾನಂದ ಸ್ವಾಮೀಜಿ ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ (ಹಿಂದುಳಿದ ವರ್ಗಗಳ ಪ್ರವರ್ಗ–1) ಜನಾಂಗಗಳ ಒಕ್ಕೂಟದಿಂದ ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಆಯೋಜಿಸಿದ್ದ 'ರಾಜ್ಯಮಟ್ಟದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಾಹಿತ್ಯ, ಸಾಂಸ್ಕೃತಿಕ ಕಲೋತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

**ಅಲೆಮಾರಿ, ಅರೆ ಅಲೆಮಾರಿ ಸಾಹಿತ್ಯ, ಸಾಂಸ್ಕೃತಿಕ ಕಲೋತ್ಸವ ಕಾರ್ಯಕ್ರಮದಲ್ಲಿ ಬಸವ ರಮಾನಂದ ಶ್ರೀ ಸರ್ಕಾರಕ್ಕೆ ಒತ್ತಾಯ**

ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯವು ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ತುಂಬಾ ಹಿಂದುಳಿದಿದೆ. ಸಮುದಾಯದ ಸಾಕ್ಷರತಾ ಪ್ರಮಾಣ ಶೇ.7ರಷ್ಟು ಮಾತ್ರ. ಕಾಯಕವನ್ನೇ ಬದುಕಿಗೆ ಆಧಾರವಾಗಿಸಿಕೊಂಡಿರುವ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ನಿಯೋಗದೊಂದಿಗೆ ತೆರಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಪಾರಂಪರಿಕ ಕುಲಕಸಬುಗಳು ನಶಿಸುತ್ತಿವೆ. ಅಲೆಮಾರಿ ಸಮುದಾಯಗಳು ಮಕ್ಕಳ ಶಿಕ್ಷಣಕ್ಕೆ (2ನೇ ಪುಟಕ್ಕೆ)

# ಅನಕ್ಷರಸ್ಥರಲ್ಲೂ ಉತ್ತಮ ಕಲೆಗಳಿವೆ: ಡಾ.ಹನೂರು

ದಾವಣಗೆರೆ, ಜ.19- ಅನಕ್ಷರಸ್ಥರಲ್ಲೂ ಉತ್ತಮ ಕಲೆಗಳಿವೆ. ಮಾನವ ಸಂಬಂಧವನ್ನು ಎತ್ತಿ ಹಿಡಿಯುವ ಸದ್ಗುಣಗಳಿವೆ. ಇಂತಹ ಬದುಕಿನ ಜನರ ಚಿತ್ರಣದ ಬಗ್ಗೆ ಸಂಶೋಧನೆ ನಡೆಸಿ, ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಅಗತ್ಯವಿದೆ ಎಂದು ಹಿರಿಯ ಸಂಶೋಧಕ ಡಾ. ಕೃಷ್ಣಮೂರ್ತಿ ಹನೂರು ಹೇಳಿದರು.

**'ಸಿರಿಯಜ್ಜಿ ಸಂಕಥನ' ಲೋಕಾರ್ಪಣೆ**

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ನಾಡೋಜ ಸಿರಿಯಜ್ಜಿ ಪ್ರತಿಷ್ಠಾನ ಬೆಂಗಳೂರು, ಮಾನವ ಬಂಧುತ್ವ ವೇದಿಕೆ ದಾವಣಗೆರೆ, ಚಳ್ಳಕೆರೆಯ ಅಮಿತ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಡಾ. ಮಂಜಣ್ಣ ಮಲ್ಲಯ್ಯ ವಿರಚಿತ (2ನೇ ಪುಟಕ್ಕೆ)

## ಎಂ.ಹೆಚ್.ಗೌಡ (ಹನುಮಂತಗೌಡ) ನಿಧನ



**ಎಂ.ಹೆಚ್. ಗೌಡರವರು**
ನಿವೃತ್ತ ಕಾರ್ಯದರ್ಶಿಗಳು, ಪಿ.ಎಲ್.ಡಿ. ಬ್ಯಾಂಕ್
ದಾವಣಗೆರೆ ಸಿಟಿ, ಕೆ.ಬಿ. ಬಡಾವಣೆ ವಾಸಿ
**ಶ್ರೀ ಎಂ.ಹೆಚ್. ಗೌಡ** (77)
ಅವರು ದಿನಾಂಕ 19.1.2025ನೇ ಭಾನುವಾರ ಸಂಜೆ 7.10ಕ್ಕೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 20.1.2025ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.
**ಇಂತಿ ದುಃಖತಪ್ತರು :** ಪತ್ನಿ ದೇವಿಕಾಗೌಡ ಮತ್ತು ಮಕ್ಕಳು ಹಾಗೂ ಮಾಗೋಡು ವಂಶಸ್ಥರು, ಕೊಂಡಜ್ಜಿ. ಮೊ. 99000-54988
ನಿರ್ದೇಶಕರು : ಚೈತನ್ಯ ಮತ್ತು ಸುರಭಿ ಮಹಿಳಾ ಕೋ-ಆಪ್. ಸೊಸೈಟಿ ಮತ್ತು ಸಿಬ್ಬಂದಿ ವರ್ಗದವರು, ದಾವಣಗೆರೆ.

# ಮಾತಿಗಿಂತ ಕೃತಿ ದೊಡ್ಡದಾಗಿಸುವಂತಹದ್ದು ವಚನ ಸಾಹಿತ್ಯ : ಸುತ್ತೂರು ಶ್ರೀಗಳು

ಚಿತ್ರದುರ್ಗ, ಜ. 19- ಮಾತು ಚಿಕ್ಕದಾಗಿ ಕೃತಿ ದೊಡ್ಡದಾಗಿಸುವಂತಹದ್ದು ವಚನ ಸಾಹಿತ್ಯ. ಜಗತ್ತಿನ ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡುವ ಅಂಶವನ್ನು ವಚನಗಳಲ್ಲಿ ಕಾಣಬಹುದು ಎಂದು ಎಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ನುಡಿದರು.



ಚಿತ್ರದುರ್ಗ ಬೃಹನ್ಮಠದಲ್ಲಿ ನಡೆಯುತ್ತಿರುವ 13ನೆಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದಲ್ಲಿ 'ಪ್ರಾತಃ ಸ್ಮರಣೀಯರು' ವಿಚಾರ ಕುರಿತ ಚಿಂತನ ಗೋಷ್ಠಿಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಜಯದೇವ ಜಗದ್ಗುರುಗಳಿಗೆ ಐತಿಹಾಸ ಸಂಘಟನೆ ಮಾಡಿದ ಕೀರ್ತಿ ದೊರೆಯುತ್ತದೆ. ಈ ಭಾಗದಲ್ಲಿ ತಿಪ್ಪೇರುದ್ರ ಸ್ವಾಮಿಯವರ ಭಕ್ತರು ಅನೇಕ. ಅವರು ಪವಾಡಗಳ ಮೂಲಕ ಪ್ರಸಿದ್ಧರಾಗಿದ್ದಂತಹ ಶ್ರೀಗಳಾಗಿದ್ದರು. ಶಿವಕುಮಾರ ಮಹಾಸ್ವಾಮಿಗಳು ವಚನ ಸಾಹಿತ್ಯವನ್ನು ಕ್ರೋಢೀಕರಿಸುವಲ್ಲಿ ಶ್ರಮ ವಹಿಸಿದ್ದವರಾಗಿದ್ದಾರೆ. ಅವರು ಧಾರ್ಮಿಕ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿದವರಾಗಿದ್ದಾರೆ

ಶರಣ ಸಾಹಿತ್ಯ ಪರಿಷತ್ ರಾಜ್ಯವ್ಯಾಪ್ತಿ ಕಾರ್ಯ ನಿರ್ವಹಿಸುತ್ತಿದೆ. ದೆಹಲಿಯಲ್ಲಿ ಅನುಭಾವ ಸಾಹಿತ್ಯದ ಬಗ್ಗೆ ಕಾರ್ಯಕ್ರಮ ನೀಡಿದೆ. ಈ ಸಂಸ್ಥೆಯು ನಿರಂತರ ಕಾರ್ಯ ನಿರ್ವಹಿಸುತ್ತಿದೆ. ಪ್ರತಿನಿತ್ಯ ಕಾರ್ಯಕ್ರಮಗಳು ನಡೆದು ಧಾರ್ಮಿಕ ವಿಚಾರಗಳನ್ನು ಪಸರಿಸುತ್ತಿದೆ ಎಂದರು.

ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮಾತನಾಡಿ, 20, 21ನೆಯ ಶತಮಾನದಲ್ಲಿ ಇಡೀ (2ನೇ ಪುಟಕ್ಕೆ)


॥ ಶ್ರೀ ಜಗದ್ಗುರು ಪಂಚಾಚಾರ್ಯ: ಪ್ರಸೀದಂತು ॥

**ಗುರು ಲಿಂಗ ಜಂಗಮಾರಾಧನೆ ಆಹ್ವಾನ ಪತ್ರಿಕೆ**

ಷ॥ ಬ್ರ॥ 108 ಶ್ರೀ ಗುರುಶಾಂತೇಶ್ವರ ಶಿವಾಚಾರ್ಯ ಸ್ವಾಮೀಜಿ
ಹಿರೇಮಠ, ನೆಗಳೂರು ಇವರ ದಿವ್ಯ ಸಾನ್ನಿಧ್ಯದಲ್ಲಿ



ದಾವಣಗೆರೆ ಹಳೇಪೇಟೆ ಹಿರೇಮಠದ
**ಶ್ರೀ ಹೆಚ್.ಪಿ. ಸ್ವಾಮಿ ತ್ರಿನೇತ್ರಾನಂದ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 10.01.2025ನೇ ಶುಕ್ರವಾರ
ಬೆಳಿಗಿನ ಜಾವ 4.00 ಗಂಟೆಗೆ
ನನ್ನ ಪೂಜ್ಯ ತಂದೆಯವರಾದ
**ವೇ. ಶ್ರೀ ಹೆಚ್.ಎಸ್. ಪವಿತ್ರಾನಂದ ಸ್ವಾಮಿ**
ಇವರು ಲಿಂಗೈಕ್ಯರಾದ ಪ್ರಯುಕ್ತ
ಮೃತರ ಆತ್ಮಶಾಂತಿಗಾಗಿ

**ಗುರು ಲಿಂಗ-ಜಂಗಮಾರಾಧನೆಯನ್ನು** ದಿನಾಂಕ 20.01.2025ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಶ್ರೀ ಸದ್ಯೋಜಾತ ಶಿವಾಚಾರ್ಯ ಮಹಸ್ವಾಮೀಜಿ ಹಿರೇಮಠ ಎಂ.ಸಿ.ಸಿ. ಬಿ ಬ್ಲಾಕ್ ದಾವಣಗೆರೆಯಲ್ಲಿ ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುವ..

ಇಂತಿ ದುಃಖತಪ್ತರು : ಶ್ರೀಮತಿ ತೇಜಸ್ವಿನಿ ಶ್ರೀ ಬಸವರಾಜ್ ಮತ್ತು ಚಿ॥ ಸಮೃದ್
ಶ್ರೀಮತಿ ಪ್ರೀತಿ ಶ್ರೀ ಪ್ರವೀಣ್ ಕುಮಾರ್,
ಹಿರೇಮಠದ ವಂಶಸ್ಥರು ಹಾಗೂ ಬಂಧು-ಮಿತ್ರರು
ಮೊ. : 97431 53991, 80955 95319, 98862 42527

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



# ದಾವಣಗೆರೆ ಜಿಲ್ಲಾ ಶಿರಸ್ತೇದಾರ್, ಉಪತಹಶೀಲ್ದಾರ್ ಸಂಘದ ಅಧ್ಯಕ್ಷರಾಗಿ ರವಿ

ದಾವಣಗೆರೆ, ಜ.19- ಕರ್ನಾಟಕ ರಾಜ್ಯ ಶಿರಸ್ತೇದಾರ್ ಮತ್ತು ಉಪತಹಶೀಲ್ದಾರ್ ಸಂಘದ ದಾವಣಗೆರೆ ಜಿಲ್ಲಾ ಘಟಕದ ನೂತನ ಅಧ್ಯಕ್ಷರಾಗಿ ಮಲೇಬೆನ್ನೂರು ನಾಡ ಕಚೇರಿಯ ಉಪತಹಶೀಲ್ದಾರ್ ಆರ್.ರವಿ ಅವರು ಶನಿವಾರ ಎಸಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ದಾವಣಗೆರೆ ಆಹಾರ ಇಲಾಖೆಯ ಶಿರಸ್ತೇದಾರ್ ಮಂಜಣ್ಣ ರುದ್ರಪ್ಪ ಬಸವಾಪಟ್ಟಣ ಮತ್ತು ರಾಜ್ಯ ಪರಿಷತ್ ಸದಸ್ಯರಾಗಿ ದಾವಣಗೆರೆ ಕೆಐಎಡಿಬಿ ವ್ಯವಸ್ಥಾಪಕ ಶಕೀಲ್ ಅಹಮದ್ ಖಾನ್, ಉಪಾಧ್ಯಕ್ಷರಾಗಿ ಆನಗೋಡು ಹೋಬಳಿ ಉಪತಹಶೀಲ್ದಾರ್ ರಾಮಸ್ವಾಮಿ, ಜಿಲ್ಲಾ ಕಾರ್ಯದರ್ಶಿಯಾಗಿ ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ್ ವಿ.ಎ.ಶ್ರೀನಿವಾಸ್, ಖಜಾಂಚಿಯಾಗಿ ಹರಿಹರ ತಾಲ್ಲೂಕು ಕಚೇರಿಯ ಹಕ್ಕು ದಾಖಲೆ ಶಿರಸ್ತೇದಾರ್ ಹರ್ಷವರ್ಧನ್, ಸಹ ಕಾರ್ಯದರ್ಶಿಯಾಗಿ ಬಸವಾಪಟ್ಟಣ ಉಪತಹಶೀಲ್ದಾರ್ ಮಂಜುನಾಥ್, ಮಹಿಳಾ ಪ್ರತಿನಿಧಿಯಾಗಿ ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೇದಾರ್ ಶ್ರೀಮತಿ ಬಿ.ಬಿ.ರೇಣುಕಾ, ಕಾನೂನು ಸಲಹೆಗಾರರಾಗಿ ಹರಿಹರ ತಾಲ್ಲೂಕು ಕಚೇರಿಯ ಚುನಾವಣಾ ಶಿರಸ್ತೇದಾರ್ ಅಶೋಕ್ ಮತ್ತು ಲೆಕ್ಕ ಪರಿಶೋಧಕರಾಗಿ ದಾವಣಗೆರೆ ತಾಲ್ಲೂಕು ಕಚೇರಿಯ ಚುನಾವಣಾ ಶಿರಸ್ತೇದಾರ್ ಮಂಜುನಾಥ್ ಬಾಬು ಆಯ್ಕೆಯಾಗಿದ್ದಾರೆ.

ದಾವಣಗೆರೆ ತಾ. ಸಂಚಾಲಕರಾಗಿ ಸಾಮಾಜಿಕ ಭದ್ರತೆ ಶಿರಸ್ತೇದಾರ್ ನಾಗಲಿಂಗೇಶ್, ಹರಿಹರ ತಾ. ಸಂಚಾಲಕರಾಗಿ ಹಕ್ಕು ದಾಖಲೆಗಳ ಶಿರಸ್ತೇದಾರ್ ಹರ್ಷವರ್ಧನ್, ಹೊನ್ನಾಳಿ ತಾ. ಸಂಚಾಲಕರಾಗಿ ಸಾಸ್ವೇಹಳ್ಳಿ ಉಪತಹಶೀಲ್ದಾರ್ ಚಂದ್ರಪ್ಪ, ನ್ಯಾಮತಿ ತಾ. ಸಂಚಾಲಕರಾಗಿ ಶಿರಸ್ತೇದಾರ್ ಶ್ರೀಮತಿ ಸೌಮ್ಯ, ಚನ್ನಗಿರಿ ತಾ. ಸಂಚಾಲಕರಾಗಿ ಸಂತೇಬೆನ್ನೂರು ಉಪತಹಶೀಲ್ದಾರ್ ಅರುಣ್‌ಕುಮಾರ್, ಜಗಳೂರು ತಾ. ಸಂಚಾಲಕರಾಗಿ ಚುನಾವಣಾ ಶಿರಸ್ತೇದಾರ್ ಕೆ.ಚಂದ್ರಪ್ಪ ನೇಮಕಗೊಂಡಿದ್ದಾರೆ.

## ದೇಶದ ಚಿತ್ತ

(1ನೇ ಪುಟದಿಂದ) ಇದೆ. ಆದರೆ ಭಾರತ ಹೂಡಿಕೆಗೆ ಹೆಚ್ಚಿನ ಆಕರ್ಷಣೆ ಪಡೆದಿದೆ. ಈ ಸಭೆಯಲ್ಲಿ ಆರ್ಥಿಕ. ಭೂ ರಾಜಕೀಯ ಹಾಗೂ ಪರಿಸರ ಅಪಾಯಗಳ ಕುರಿತು ಪ್ರಮುಖವಾಗಿ ಚರ್ಚಿಸಲಾಗುವುದು. ಡಬ್ಲ್ಯೂ.ಇ. ಎಫ್. ಸಭೆಯಲ್ಲಿ 130 ದೇಶಗಳ 3 ಸಾವಿರಕ್ಕೂ ಹೆಚ್ಚು ನಾಯಕರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

## ಕಠಿಣ ಮಾಡುತ್ತಿದೆ

(1ನೇ ಪುಟದಿಂದ) ವಿದೇಶಕ್ಕೆ ತೆರಳಿದ್ದಾರೆ ಎಂದು ಹೇಳಿದ್ದಾರೆ. ಸಂಕೀರ್ಣ ಜಿಎಸ್‌ಟಿ ಹಾಗೂ ಆದಾಯ ತೆರಿಗೆಗಳ ಕಾರಣದಿಂದಾಗಿ ತೆರಿಗೆ ಉಗ್ರವಾದವೇ ಉಂಟಾಗಿದೆ. ಇದು ದೇಶದ ಸಮೃದ್ಧಿಗೆ ಅತಿ ದೊಡ್ಡ ಬೆದರಿಕೆಯಾಗಿದೆ. ಉದ್ಯಮ ನಡೆಸುವುದು ಕಠಿಣವಾಗುತ್ತಿದೆ ಎಂದು ರಮೇಶ್ ಹೇಳಿದ್ದಾರೆ.

2014ರ ನಂತರ ಖಾಸಗಿ ದೇಶಿಯ ಹೂಡಿಕೆ ದುರ್ಬಲವಾಗಿದೆ. ಮನಮೋಹನ್ ಸಿಂಗ್ ಅವರು ಪ್ರಧಾನಮಂತ್ರಿಯಾಗಿದ್ದ ಅವಧಿಯಲ್ಲಿ ಖಾಸಗಿ ದೇಶಿಯ ಹೂಡಿಕೆ ಪ್ರಮಾಣ ಜಿಡಿಪಿಯ ಶೇಕಡಾ 25 ರಿಂದ 30 ರಷ್ಟು ಇತ್ತು ಎಂದು ರಮೇಶ್ ಹೇಳಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಇದು ಜಿಡಿಪಿಯ ಶೇಕಡಾ 20 ರಿಂದ 25ಕ್ಕೆ ಕುಸಿದಿದೆ. ಹೂಡಿಕೆ ಕುಸಿಯುವ ಜೊತೆಗೆ ಉನ್ನತ ಆದಾಯ ಹೊಂದಿರುವವರು ದೇಶ ಬಿಟ್ಟು ಹೋಗುತ್ತಿದ್ದಾರೆ. 17.5 ಲಕ್ಷ ಭಾರತೀಯರು ಕಳೆದ ಹತ್ತು ವರ್ಷಗಳಲ್ಲಿ ವಿದೇಶಿ ಪೌರತ್ವ ಪಡೆದಿದ್ದಾರೆ ಎಂದವರು ಹೇಳಿದರು.

2022 ರಿಂದ 2025 ರ ನಡುವೆ 25,300 ಡಾಲರ್ ಮಿಲಿಯನೇರ್‌ಗಳು ದೇಶ ತೊರೆದಿದ್ದಾರೆ ಎಂದೂ ರಮೇಶ್ ಹೇಳಿದ್ದಾರೆ. ಇದಕ್ಕೆಲ್ಲ ಸಂಕೀರ್ಣ ಜಿಎಸ್‌ಟಿ, ಚೀನಾದಿಂದ ಹೆಚ್ಚಾಗುತ್ತಿರುವ ಆಮದು ಹಾಗೂ ದುರ್ಬಲವಾಗುತ್ತಿರುವ ದೇಶಿಯ ಬಳಕೆ ಮತ್ತು ಕುಂಠಿತವಾಗಿರುವ ಕೂಲಿಗಳು ಕಾರಣ ಎಂದು ಕಾಂಗ್ರೆಸ್ ನಾಯಕ ಹೇಳಿದ್ದಾರೆ.

# ಅನಕ್ಷರಸ್ಥರಲ್ಲೂ ಉತ್ತಮ ಕಲೆಗಳಿವೆ: ಡಾ.ಹನೂರು



(1ನೇ ಪುಟದಿಂದ) 'ಸಿರಿಯಜ್ಜಿ ಸಂಕಥನ' ಪುಸ್ತಕ ಲೋಕಾರ್ಪಣೆ ಸಮಾರಂಭದಲ್ಲಿ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಗುಡ್ಡಗಾಡು, ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಅಸಂಖ್ಯಾತ ಅನಕ್ಷರಸ್ಥರು ಆಧುನಿಕ ಮಾನವ ಜಗತ್ತನ್ನೇ ನಾಚಿಸುವಂತಹ ಸರಳ ಜೀವನ ಕ್ರಮ, ಆಹಾರ ಪದ್ಧತಿ, ಕಲೆ, ಸಂಸ್ಕೃತಿಯನ್ನು ಅಳವಡಿಸಿಕೊಂಡಿದ್ದು, ಇಂತಹ ಜನರ ಬದುಕಿನ ಚಿತ್ರಣವನ್ನು ಪರಿಚಯಿಸುವ ಜವಾಬ್ದಾರಿಯನ್ನು ಪ್ರಾಧ್ಯಾಪಕರು ಹೊರಬೇಕಾಗಿದೆ ಎಂದರು.

ಡಾ.ಮಂಜಣ್ಣ ಬರೆದಿರುವ 'ಸಿರಿಯಜ್ಜಿ ಸಂಕಥನ' ದಲ್ಲಿ ಬರುವ ಸಿರಿಯಜ್ಜಿಯು ಜನಪದ ಹಾಡುಗಳಿಂದಲೇ ಬುಡಕಟ್ಟು ಜನಾಂಗದಲ್ಲಿ ಗುರುತಿಸಿಕೊಂಡು ಖ್ಯಾತಿ ಹೊಂದಿದ್ದಾರೆ. ಸಿರಿಯಜ್ಜಿಯು ಇಡೀ ಗೊಲ್ಲ ಸಮುದಾಯದ ಚಿತ್ರಣವನ್ನು ತನ್ನ ಜೀವನ ಕ್ರಮ, ಜನಪದ ಕಲೆಯಿಂದಲೇ ಕಟ್ಟಿಕೊಂಡಿರುವುದನ್ನು ನೋಡಿದರೆ ಒಬ್ಬ ಅನಕ್ಷರಸ್ಥೆಯಲ್ಲಿನ ಅಪಾರ ಪಾಂಡಿತ್ಯ ನಿಬ್ಬೆರಗಾಗಿಸುವಂತೆ ಮಾಡುತ್ತದೆ. ಪಿಹೆಚ್‌ಡಿ ಪದವಿ ಪಡೆದವರಿಗೆ ಇರದಷ್ಟು ಜ್ಞಾನ ಸಂಪತ್ತು ಸಿರಿಯಜ್ಜಿಯಲ್ಲಿರುವುದು ತಿಳಿಯುತ್ತದೆ ಎಂದು ಹೇಳಿದರು.

ಇಂತಹ ಅಸಂಖ್ಯಾತ ಜನಪದರು ನಮ್ಮ ಮಧ್ಯೆ ಇದ್ದು, ಅವರ ಕಲೆಯನ್ನು ಸಮಾಜದ ಮುಖ್ಯವಾಹಿನಿಗೆ ತರುವ ಜವಾಬ್ದಾರಿ ಪ್ರಾಧ್ಯಾಪಕರ ಮೇಲಿದೆ ಎಂದರು.

ದೇಶದಲ್ಲಿ ಮೌಢ್ಯ, ಅಂಧಶ್ರದ್ಧೆ ಜೊತೆಗೆ ಒಳ್ಳೆಯದೂ ಇದೆ. ಜಾನಪದ ಮತ್ತು ಶಿಷ್ಟ ಪರಂಪರೆಯಲ್ಲೂ ಒಳ್ಳೆಯದು ಮತ್ತು ಕೆಟ್ಟದ್ದಿದೆ. ಅದರಲ್ಲಿ ಒಳ್ಳೆಯದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಿದೆ. ಸಿರಿಯಜ್ಜಿ ಗೊತ್ತಿಲ್ಲ ಎನ್ನುತ್ತಲೇ ಎಲ್ಲವನ್ನು ಬಲ್ಲವಳಾಗಿದ್ದಳು. ಆದರೆ ಪ್ರಾಧ್ಯಾಪಕರು ಎಲ್ಲಾ ಗೊತ್ತು ಅಂತಾರೆ ಅವರಿಗೆ ಏನೂ ತಿಳಿದಿರುವುದಿಲ್ಲ. ಅನಕ್ಷರಸ್ಥರಲ್ಲೂ ಉತ್ತಮ ಕಲೆಗಳಿವೆ. ಮಾನವ ಸಂಬಂಧದ ಮೌಲ್ಯ ಎತ್ತಿ ಹಿಡಿಯುವ ಸದ್ಗುಣಗಳಿವೆ ಎಂದು ಹೇಳಿದರು.

ಕೆಟ್ಟದ್ದನ್ನು ಬದಿಗಿಟ್ಟು ಒಳ್ಳೆಯದರ ಬಗ್ಗೆ ದೇಶದ ಯುವ ಸಮೂಹ ಅರಿತುಕೊಳ್ಳಬೇಕಾಗಿದೆ. ಈ ವಿಚಾರವನ್ನು ಅಧ್ಯಾಪಕರಾದವರು ತಿಳಿಸದೇ ಹೋದರೆ ಅವರ ಜವಾಬ್ದಾರಿ ಅಪೂರ್ಣ ಎಂದರು.

ಪುಸ್ತಕ ಕುರಿತು ಹಂಪಿ ಕನ್ನಡ ವಿವಿ ಸಿಂಡಿಕೇಟ್ ಸದಸ್ಯ ಡಾ. ಎಸ್.ಎಂ. ಮುತ್ತಯ್ಯ ಮಾತನಾಡಿ, ಕನ್ನಡ ಸಾಹಿತ್ಯ, ಸಂಸ್ಕೃತಿಯಲ್ಲಿ ಜಾನಪದ ಸಾಹಿತ್ಯ ಕಣ್ಣಿಗೆ ಬೀಳಲಿಲ್ಲ. ನಂತರ ಹಾ.ಮ. ನಾಯಕ್ ಅಂತವರು ವಿದೇಶಕ್ಕೆ ತೆರಳಿದ ವೇಳೆ ಮಿಷನರಿಗಳು ಜನಪದ ಸಾಹಿತ್ಯವನ್ನು ದಾಖಲಿಸಿ, ಅದಕ್ಕೆ ಗೌರವ ಕೊಡುತ್ತಿರುವುದು ಕಂಡ ನಂತರದಲ್ಲಿ ರಾಜ್ಯದಲ್ಲಿ ಜನಪದ ಸಾಹಿತ್ಯಕ್ಕೆ ಸ್ಥಾನ ನೀಡಲಾಯಿತು. ವಿವಿಗಳು ಜನಪದವನ್ನು ಪಠ್ಯವಾಗಿ ಪರಿಗಣಿಸಿದಾಗ ಅನಕ್ಷರಸ್ಥರ ಸಾಹಿತ್ಯ ಎಂಬ ಕಾರಣಕ್ಕಾಗಿ ಮೊದಲಿಗೆ ಆಕ್ಷೇಪ ವ್ಯಕ್ತವಾಗಿತ್ತು. ಕಾಲಕ್ರಮೇಣ ಜನಪದ ಸಾಹಿತ್ಯ ಎಲ್ಲರಿಗೂ ಪ್ರಿಯವೆನಿಸಿತು ಎಂದು ಹೇಳಿದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ.ಎ.ಬಿ. ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಸಂಶೋಧಕ ಮಲ್ಲಯ್ಯ ಕಟ್ಟೇರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ಡಾ. ಜಿ.ಕೆ.ಪ್ರೇಮ, ಲೇಖಕ ಡಾ. ಮಂಜಣ್ಣ ಮಲ್ಲಯ್ಯ, ಬಿ. ಶಾರದಮ್ಮ ಉಪಸ್ಥಿತರಿದ್ದರು.

ಚೇತನ್ ಸಂಗಡಿಗರು ಪ್ರಾರ್ಥಿಸಿದರು. ಮಲ್ಲಿಕಾರ್ಜುನ್ ತೂಲಹಳ್ಳಿ ಸ್ವಾಗತಿಸಿದರು. ಡಾ. ಪಿ.ಕೆ. ಇಂಗಳಗೊಂದಿ ವಂದಿಸಿದರು.

## ಕೈ ಕಸೂತಿ ತರಬೇತಿ

ದಾವಣಗೆರೆ, ಜ. 19- ಭಾರತ ವಿಕಾಸ ಪರಿಷತ್ ಗೌತಮ ಶಾಖೆ ದಾವಣಗೆರೆ ವತಿಯಿಂದ ಇಲ್ಲಿನ ವಿದ್ಯಾನಗರದಲ್ಲಿ ಮಹಿಳೆಯರಿಗೆ ಉಚಿತ ಕೈ ಕಸೂತಿ ತರಬೇತಿ ಅರ್ಜಿ ಆಹ್ವಾನಿಸಲಾಗಿದೆ ಆರ್ಥಿಕವಾಗಿ ಹಿಂದುಳಿದವರು ಇದರ ಉಪಯೋಗ ಪಡೆದೊಳ್ಳಬಹುದು.ಹೆಚ್ಚಿನ ಮಾಹಿತಿಗಾಗಿ ಭವಾನಿ ಶಂಭುಲಿಂಗಪ್ಪ (78293 79675), ನೇತ್ರಾ ಮಧುಕರ್ (91643 48699), ಅಕ್ಷಯ್ ಸುರ್ವೆ (96065 81587) ಅವರನ್ನು ಸಂಪರ್ಕಿಸಬಹುದು.

## 28 ರಂದು ದಿಶಾ ಸಮಿತಿ ಸಭೆ

ದಾವಣಗೆರೆ, ಜ. 19 - ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಅಧ್ಯಕ್ಷತೆಯಲ್ಲಿ ಇದೇ ದಿನಾಂಕ 28 ರಂದು ಬೆಳಿಗ್ಗೆ 11 ಕ್ಕೆ ಜಿ.ಪಂ. ಮುಖ್ಯ ಸಭಾಂಗಣದಲ್ಲಿ ದಿಶಾ ಸಮಿತಿ ಸಭೆ ನಡೆಯಲಿದೆ.

# ಎಸ್‌ಎಲ್‌ಎನ್ ಕಾನ್ವೆಂಟ್ ಶಾಲೆಯಲ್ಲಿ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ




ದಾವಣಗೆರೆ, ಜ. 19- ನಗರದ ಸಿದ್ದವೀರಪ್ಪ ಬಡಾವಣೆಯ ಎಸ್‌ಎಲ್‌ಎನ್ ಕಾನ್ವೆಂಟ್‌ನ 26ನೇ ವರ್ಷದ ವಾರ್ಷಿಕೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವು ಶ್ರೀ ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹಿರೇಮಠದಲ್ಲಿ ನಡೆಯಿತು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಲ್ಲಮ್ಮ ಆರ್. ಚೌಬೆ, ಶ್ರೀಮತಿ ಪ್ರಸನ್ನ ಬಿ., ಶ್ರೀಮತಿ ರೂಪಶ್ರೀ ಆಗಮಿಸಿದ್ದರು. ಸುಜಾತ ನಾಗೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಾಲೆಯ ನಿರ್ದೇಶಕ ಸುರೇಶ್ ಬಿ. ಕುಂಟೆ ಮಕ್ಕಳಿಗೆ ಬಹುಮಾನ ವಿತರಿಸಿದರು. ನಾಗೇಶ್ ಮೀರಜ್‌ಕರ್ ಸ್ವಾಗತಿಸಿದರು. ಶ್ರೀಮತಿ ಶಾಂತಾ ಮತ್ತು ಗೀತಾ ಪ್ರಾರ್ಥಿಸಿದರು. ಶ್ರೀಮತಿ ವಿಜಯ ವೀರೇಂದ್ರ ಕಾರ್ಯಕ್ರನ ನಿರೂಪಿಸಿದರು. ಶ್ರೀಮತಿ ಲಕ್ಷ್ಮಿ ಸುಮಂತ್ ಶಾಲಾ ವಾರ್ಷಿಕ ವರದಿ ಹಾಗೂ ಅತಿಥಿಗಳನ್ನು ಪರಿಚಯಿಸಿದರು.

2023-24ನೇ ಶೈಕ್ಷಣಿಕ ಸಾಲಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಡಿಂಪನ ಆರ್.ಪಿ., ಗ್ರೀಷ್ಮ ಆರ್., ಅದ್ವಿತ ಪ್ರಭು ಅವರುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ವಿಜೇತರಾದ ಆರ್. ಗ್ರೀಷ್ಮ, ಕೆ.ಪಿ. ಪ್ರತೀಕ್ಷ, ಎಸ್. ಕೀರ್ತನ, ಕಬೀರ್ ಜಿದಾನ್ ಅದ್ವಾನಿ, ಹರ್ಷಿತಾ, ಯು.ಜೆ. ಚೇತನ್ ಅವರುಗಳಿಗೆ ಬಹುಮಾನ ವಿತರಿಸಲಾಯಿತು.

## ಅಂಕ ಗಳಿಕೆಗೆ ಪೂರಕ

(1ನೇ ಪುಟದಿಂದ) ಕರೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಪರಿಸರ ಮಾಲಿನ್ಯ ಹೆಚ್ಚುತ್ತಿದೆ. ಪ್ರತಿಯೊಬ್ಬರು ಜೀವನದಲ್ಲಿ ಒಂದಾದರೂ ಮರ ಬೆಳೆಸಬೇಕು. ನಗರದಲ್ಲಿ ಸ್ಥಳೀಯ ಜಾತಿ ಸಸಿಗಳನ್ನು ಬಿಟ್ಟು, ವಿದೇಶಿ ಸಸಿಗಳನ್ನು ನೆಡಲು ಅವಕಾಶ ನೀಡಬಾರದು ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಚಿರಂತನ ಸಂಸ್ಥಾಪಕ ಅಧ್ಯಕ್ಷೆ ದೀಪಾ ಎನ್.ರಾವ್, ಕಲೆ, ಸಂಸ್ಕೃತಿ, ಸಂಸ್ಕಾರ, ಪರಂಪರೆ ಉಳಿದರೆ ಆ ಜಾಗ, ನಗರ ಹಾಗೂ ದೇಶ ಉದ್ಧಾರವಾಗುತ್ತದೆ ಎಂದರು.

ಚಿರಂತನ ಸಂಸ್ಥೆ ಕೇವಲ ಚಿಕ್ಕ ಸಂಸ್ಥೆಯಾಗಿ ಉಳಿಯದೆ ವಿಶ್ವ ಮಟ್ಟದಲ್ಲಿ ಬೆಳೆಸುವ, ಅಂತರ್ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಸ್ಥೆಯನ್ನಾಗಿಸುವ ಅಭಿಲಾಷೆ ಇದೆ ಎಂದರು.

ದಾವಣಗೆರೆಯಲ್ಲಿ ಸುಸಜ್ಜಿತ ರಂಗ ಮಂದಿರದ ಕೊರತೆ ಇದೆ. ಧ್ವನಿ, ಬೆಳಕು, ಅತ್ಯುನ್ನತ ಸಲಕರಣೆಗಳನ್ನು ಹೊಂದುವ ಸುಸಜ್ಜಿತ ರಂಗ ಮಂದಿರ ನಿರ್ಮಾಣ ಮಾಡುವುದು ನಮ್ಮ ಕನಸಾಗಿದ್ದು, ಸ್ಥಳೀಯರ ಪ್ರೋತ್ಸಾಹ ಬೇಕಿದೆ ಎಂದರು.

ಸಂಸ್ಥೆಯ ಕಾರ್ಯದರ್ಶಿ ಮಾಧವ ಪದಕಿ ಅತಿಥಿಗಳನ್ನು ಸ್ವಾಗತಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್ ಚಲವಾದಿ, ಸಹಾಯಕ ನಿರ್ದೇಶಕ ರವಿಚಂದ್ರ,

ಸಂಸ್ಥೆಯ ಸಲಹೆಗಾರರಾದ ಬಿ.ಟಿ. ಅಚ್ಯುತ್, ಲತಿಕಾ ದಿನೇಶ್ ಶೆಟ್ಟಿ ಉಪಸ್ಥಿತರಿದ್ದರು. ಸುರೇಂದ್ರ ಮತ್ತು ತಂಡದವರು ವಾದ್ಯ ಸಂಗೀತ, ಕು.ಶರಣ್ಯ ಮತ್ತು ತಂಡದವರು ಕರ್ನಾಟಕದ ಹಿರಿಮೆ-ಗರಿಮೆ ಸಾರುವ ನೃತ್ಯ ಪುಂಜ, ವಿದುಷಿ ರಕ್ಷಾ ರಾಜಶೇಖರ್ ನಾಟ್ಯ ವಿಲಾಸ ಹಾಗೂ ಡಾ.ಸಂಜೀವ್ ಶಾಂತಾರಾಮ್ ಮತ್ತು ತಂಡದವರು ಶಿವತಾಂಡವ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

# ನೊಂದ ಮಹಿಳೆಯರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸವಾಗಬೇಕು

## 'ವಿಧಾನ್ ಸೆ ಸಮಾಧಾನ್' ಕಾನೂನು ಅರಿವು ಕಾರ್ಯಕ್ರಮದಲ್ಲಿ ನ್ಯಾ. ರಾಜೇಶ್ವರಿ ಎನ್. ಹೆಗಡೆ ಸಲಹೆ

ದಾವಣಗೆರೆ,ಜ.19- ಸಮಾಜದಲ್ಲಿ ದೌರ್ಜನ್ಯ ಕ್ಕೊಳಗಾಗಿ ನೊಂದ ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ಆಪ್ತ ಸಮಾಲೋಚನೆ ಜೊತೆಗೆ ಅವರಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸವಾಗಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ವಿಧಾನ್ ಸೆ ಸಮಾಧಾನ್' ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೌರ್ಜನ್ಯಕ್ಕೆ ಒಳಪಟ್ಟ ಮಹಿಳೆಯರಿಗೆ ಕಾನೂನು ಸಲಹೆ, ಆರ್ಥಿಕ ಪರಿಹಾರ, ತಾತ್ಕಾಲಿಕ ಆಶ್ರಯ, ರಕ್ಷಣೆ ನೀಡುವುದರ ಜೊತೆಗೆ ಸ್ವಯಂಪ್ರೇರಣೆಯಿಂದ ಸ್ವಾವಲಂಬಿಯಾಗಿ ಬದುಕಲು ಅನುಕೂಲವಾಗುವಂತೆ ತರಬೇತಿ ನೀಡುವುದರೊಂದಿಗೆ ಇಂತಹ ಮಹಿಳೆಯರನ್ನು ಆರ್ಥಿಕವಾಗಿ ಸಶಕ್ತರನ್ನಾಗಿ ಮಾಡುವುದೇ ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.



ಆಶ್ರಯದ ಅಗತ್ಯವಿರುವ ಮಹಿಳೆಯರಿಗೆ ಅಲ್ಪಾವಧಿ ವಸತಿ ಗೃಹಗಳಲ್ಲಿ ಹಾಗೂ ಅಲ್ಪಾವಧಿ ಗೃಹಗಳು ಇಲ್ಲದೇ ಇರುವ ಸ್ಥಳಗಳಲ್ಲಿ ಇಲಾಖೆಯ ಸ್ವೀಕಾರ ಕೇಂದ್ರ ಅಥವಾ ರಾಜ್ಯ ಮಹಿಳಾ ನಿಲಯಗಳಲ್ಲಿ ತಾತ್ಕಾಲಿಕವಾಗಿ ಆಶ್ರಯ ನೀಡಲಾಗುವುದು. ಸಲಹಾ ಸೇವೆ ಅಗತ್ಯವಿದ್ದಲ್ಲಿ ತರಬೇತಿ ಹೊಂದಿದ ಸಲಹೆಗಾರರ ಮೂಲಕ ಸಮಾಲೋಚನೆಯ ಸೇವೆಯನ್ನು ನೀಡಲಾಗು ವುದು. ಕಾನೂನು ನೆರವು ಅವಶ್ಯಕತೆ ಇರುವ ಪ್ರತಿಯೊಂದು ಪ್ರಕರಣಗಳಿಗೆ ವಕೀಲರನ್ನು ನೇಮಿಸಿಕೊಳ್ಳಲು ಆರ್ಥಿಕ ನೆರವು ನೀಡಲಾಗು ವುದು ಎಂದು ತಿಳಿಸಿದರು.

ಅಲ್ಲದೇ ರಕ್ಷಣೆ ಕೋರಿ ಬಂದ ಮಹಿಳೆಯರು ವಿದ್ಯಾಭ್ಯಾಸವನ್ನು ಮುಂದುವರೆಸಲು ಇಚ್ಛಿಸಿದಲ್ಲಿ ಅಂತಹವರಿಗೆ ಆರ್ಥಿಕ ನೆರವು ಒದಗಿಸಿ ವಸತಿ ಗೃಹಗಳಲ್ಲಿ ಆಶ್ರಯ ನೀಡಲಾಗುವುದು. ಸಾಂತ್ವನ ಕೇಂದ್ರದಲ್ಲಿ ದೂರು ದಾಖಲಿಸಿದ ಮಹಿಳೆಗೆ ಆರ್ಥಿಕ ನೆರವಿನ ಅಗತ್ಯವಿದ್ದಲ್ಲಿ ಜಿಲ್ಲಾ ಸಮಿತಿಯ ನಿರ್ಧಾರದ ಪ್ರಕಾರ ಆರ್ಥಿಕ ಪರಿಹಾರ ನೀಡಲಾಗುವುದು. ದೌರ್ಜನ್ಯಕ್ಕೆ ಒಳಗಾದ ಮಹಿಳೆಯು ಮರಣ ಹೊಂದಿದ ಪಕ್ಷದಲ್ಲಿ ಅಂತಹ ಮಹಿಳೆಯರ ಮಕ್ಕಳ ಶಿಕ್ಷಣ ಹಾಗೂ ಪುನರ್ವಸತಿಗಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡಲಾಗುವುದು. ಈ ಮಹಿಳೆಯರು ಉದ್ಯೋಗಸ್ಥ ಮಹಿಳೆಯರ ವಸತಿಗೃಹದಲ್ಲಿ ಗರಿಷ್ಠ ವರ್ಷದವರೆಗೆ ಇರಲು ಅವಕಾಶವಿದೆ ಎಂದು ವಿವರಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ ಮಾತನಾಡಿ ಸಂವಿಧಾನದ ಆಶಯದಂತೆ ಮಹಿಳೆಯರಿಗೆ ಮತ್ತು ಮಕ್ಕಳಿಗೆ ವಿಶೇಷವಾದ ಯೋಜನೆಗಳನ್ನು ಜಾರಿಗೆ ತಂದಿದೆ. ಸಾಮಾಜಿಕ ಶೋಷಣೆಗಳಾದ ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ, ವೈವಾಹಿಕ ಜೀವನದಲ್ಲಿ ತೀವ್ರತರಹ ಸಮಸ್ಯೆಗಳು, ಅತ್ಯಾಚಾರ, ದೌರ್ಜನ್ಯದ ವಿರುದ್ದ ಮಹಿಳೆಯರಿಗೆ ಸೂಕ್ತ ಸಲಹೆ, ಸಹಕಾರಕ್ಕೆ ಇಲಾಖೆಯ ನೆರವನ್ನು ನೀಡಲಾಗು ವುದು ಎಂದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ಅಧ್ಯಕ್ಷತೆ ವಹಿಸಿದ್ದರು. ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಂಜುನಾಥ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಉಪನಿರ್ದೇಶಕ ಡಾ. ಕೆ.ಕೆ ಪ್ರಕಾಶ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿ ಗುರುಪ್ರಸಾದ್, ಹಿರಿಯ ವಕೀಲರಾದ ಸುಧಾ ಹೆಚ್.ಎನ್, ಅನಿತಾ ಸಿ.ಪಿ ಉಪಸ್ಥಿತರಿದ್ದರು.

## ಸುಧಾರಣೆಗೆ 'ಶಿಕ್ಷಣ ಸುಧಾರಣಾ ಸಮಿತಿ'

(1ನೇ ಪುಟದಿಂದ) ಶಿಕ್ಷಣ ಇಲಾಖೆಯ ನಿರ್ದೇಶಕರು (ಪ್ರೌಢ ಶಿಕ್ಷಣ) ಸೂಚನೆ ನೀಡಿದ್ದಾರೆ. ಆಯಾ ತಾಲ್ಲೂಕು ವ್ಯಾಪ್ತಿಯ ಶಾಸ ಕರು ಈ ಸಮಿತಿಯ ಅಧ್ಯಕ್ಷರಾಗ ಲಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿ ಸದಸ್ಯ ಕಾರ್ಯದರ್ಶಿ ಆಗಿ ಇರಲಿದ್ದಾರೆ.

ತಹಶೀಲ್ದಾರ್, ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ, ಪಂಚಾಯತ್‌ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ತಾಲ್ಲೂಕಿನಲ್ಲಿ ಅತೀ ಹೆಚ್ಚು ದಾಖಲಾತಿ ಇರುವ ಪ್ರೌಢ ಶಾಲೆ ಮತ್ತು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು, ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು, ಡಯಟ್‌ನ ಹಿರಿಯ ಉಪನ್ಯಾಸಕರು (ಒಬ್ಬರು– ತಾಲ್ಲೂಕು ನೋಡಲ್ ಅಧಿಕಾರಿ), ತಾಲ್ಲೂಕಿನಲ್ಲಿ ಹೆಚ್ಚಿನ ದಾಖಲಾತಿ ಇರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಎಸ್‌ಡಿಎಂ ಪ್ರತಿನಿಧಿಗಳು (ತಲಾ ಒಬ್ಬರು), ಸರ್ಕಾರ ನಾಮ ನಿರ್ದೇಶಿತ ಐವರು ಈ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ.

ಸರ್ಕಾರ ನಾಮನಿರ್ದೇಶನ ಮಾಡುವ ಐವರಲ್ಲಿ ಒಬ್ಬರು ಪದವೀಧರರು, ಉಳಿದಂತೆ ಎಸ್‌ಸಿ/ ಎಸ್‌ಟಿ, ಮಹಿಳೆ, ಹಿಂದುಳಿದ ಮತ್ತು ಸಾಮಾನ್ಯ ಗುಂಪಿನ ಇಬ್ಬರು ಇರಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

## ಮಹಿಳೆಯರಿಗೂ ಶಿಕ್ಷಣ ಇರಲಿ ಎಂದ ಮುಖಂಡ

(1ನೇ ಪುಟದಿಂದ) ವರದಿಗಳು ಬಂದಿದ್ದವು.

ಆಫ್ಘಾನಿಸ್ತಾನದಲ್ಲಿ ಮಹಿಳೆಯರು ಮತ್ತು ಬಾಲಕಿಯರು ಮಹಿಳಾ ವೈದ್ಯರಿಂದ ಮಾತ್ರ ಚಿಕಿತ್ಸೆ ಪಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ತಡೆಯುವ ಆದೇಶ ಇನ್ನೂ ದೃಢಪಡಬೇಕಿದೆ.

ಮಹಿಳೆಯರಿಗೆ ಶಿಕ್ಷಣದ ಬಾಗಿಲು ಮತ್ತೆ ತೆರೆಯಬೇಕಿದೆ. ಶಿಕ್ಷಣ ನಿರಾಕರಿಸುವುದರಿಂದ ದೇಶದ 20 ದಶಲಕ್ಷ ಮಹಿಳೆಯರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಸ್ಟಾನಿಕ್‌ಝುಲ್ ಹೇಳಿಕೆ ನೀಡಿದ್ದಾರೆ.

# ಮಾತಿಗಿಂತ ಕೃತಿ ದೊಡ್ಡದಾಗಿಸುವಂತಹದ್ದು ವಚನ ಸಾಹಿತ್ಯ

(1ನೇ ಪುಟದಿಂದ) ಸಮಾಜದ ಘನತೆ, ಸ್ವಾಭಿಮಾನ ಎತ್ತಿ ಹಿಡಿದವರು ಜಯದೇವ ಜಗದ್ಗುರುಗಳು ಮತ್ತು ಶಿವರಾತ್ರಿ ದೇಶಿಕೇಂದ್ರ, ರಾಜೇಂದ್ರ ಸ್ವಾಮಿಗಳು ಎಂದು ಹೇಳಿದರು.

ಶಿಕ್ಷಣ, ಅನ್ನ, ಸಂಸ್ಕಾರ ಈ ಮೂರನ್ನು ಸಮಾಜಕ್ಕೆ ಕೊಟ್ಟವರು ಬಸವಣ್ಣನವರು. ನಂತರ ಅದನ್ನು ಮುಂದುವರೆಸಿಕೊಂಡು ಬಂದದ್ದು ಮುರುಘಾ ಮಠ ಮತ್ತು ಸುತ್ತೂರು ಮಠ. ಸಮಾಜಕ್ಕೆ ತಮ್ಮನ್ನೇ ತಾವು ಸಮರ್ಪಿಸಿಕೊಂಡವರು ಉಭಯ ಸ್ವಾಮಿಗಳು. ಅಸಂಘಟಿತ ಸಮಾಜವನ್ನು ಸಂಘಟಿಸಲು ರಾಜ್ಯವನ್ನು ಸುತ್ತಿದರು ಜಯದೇವ ಜಗದ್ಗುರುಗಳು. ಹಸಿದವರಿಗೆ ಅನ್ನದ ಜೊತೆಗೆ ಶಿಕ್ಷಣ ಕೊಟ್ಟಿದ್ದಾರೆ. ಅವರೆಲ್ಲ ಮಠ ಬಿಟ್ಟು ಸಮಾಜ ಕಟ್ಟುವ ಕೆಲಸ ಮಾಡಿದರು. ಶರಣರಿಗೆ ಸಂಘಟನೆ ಮಾಡುವ ಶಕ್ತಿಯಿದೆ ಎಂದು ತೋರಿಸಿಕೊಟ್ಟವರು ದೇಶಿಕೇಂದ್ರ ಸ್ವಾಮಿಗಳು ಎಂದು ತಿಳಿಸಿದರು.

ಪಂಚಮಸಾಲಿ ಗುರುಪೀಠದ ಡಾ.ಜಗದ್ಗುರು ವಚನಾನಂದ ಮಹಾಸ್ವಾಮಿಗಳು ಮಾತನಾಡಿ, ಬಸವ ತತ್ವ ಹೇಗಿರಬೇಕು ಎಂದು ಹೇಳಿ ಬಾಳಿದವರು ದೇಶಿಕೇಂದ್ರ ಸ್ವಾಮಿಗಳು. ನಮಗೆ ಬದುಕಿನಲ್ಲಿ ಹೇಗೆ ಬಾಳಬೇಕೆಂಬುದನ್ನು ಕಲಿಸಿಕೊಟ್ಟವರು ಸಿದ್ಧೇಶ್ವರ ಸ್ವಾಮಿಗಳು. ಸಾವಿನ ಕೊನೆಯ ಕ್ಷಣದಲ್ಲೂ ಸಹ ವಚನಗಳನ್ನು ಪಸರಿಸಿದವರು. ಸಿದ್ಧೇಶ್ವರ ಸ್ವಾಮಿಗಳು ಸೂಕ್ಷ್ಮ ಜೀವಿಯಾಗಿದ್ದರು ಎಂದು ನುಡಿದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಮುರುಘರಾಜೇಂದ್ರ ಮಠದ ಡಾ.ಬಸವಕುಮಾರ ಮಹಾಸ್ವಾಮಿಗಳು ಮಾತನಾಡಿ, ಶ್ರೀ ಜಯದೇವ ಜಗದ್ಗುರುಗಳು ನನಗೆ ಧನ ಸಹಾಯ ಮಾಡಿದ್ದಾರೆಂದು ಹಳಕಟ್ಟಿಯವರು ಬರೆದಿದ್ದಾರೆ. ಹರ್ಡೇಕರ್ ಮಂಜಪ್ಪನವರಿಗೆ ಧನ ಸಹಾಯ ಮಾಡಿಸುತ್ತಾರೆ. 1903ರಲ್ಲಿ ಚಿತ್ರದುರ್ಗ ಸಂಸ್ಥಾನದ ಪೀಠಾಧಿಪತಿಗಳಾಗಿ 1956ರಲ್ಲಿ ಲಿಂಗೈಕ್ಯರಾದರು. ರಾಷ್ಟ್ರಪತಿಗಳು, ಮುಖ್ಯಮಂತ್ರಿಗಳು, ರಾಷ್ಟ್ರಕವಿಗಳು ಶ್ರೀಗಳ ಸಹಾಯ ಪಡೆದು, ಅವರ ಆದರ್ಶಗಳನ್ನು ರೂಢಿಸಿಕೊಂಡು ಮಹಾನ್ ವ್ಯಕ್ತಿಗಳಾಗಿದ್ದರು. ಚಾಮರಾಜಪೇಟೆಯಲ್ಲಿ ಸಾಹಿತ್ಯ ಪರಿಷತ್ ಸ್ಥಾಪಿಸಲು ಶ್ರೀಗಳು ಧನ ಸಹಾಯ ಮಾಡಿದ್ದರು. ಕರ್ನಾಟಕ ಏಕೀಕರಣದ ಚಳವಳಿಗೆ ಮಂಗಳೂರಿಗೆ ಶ್ರೀಗಳನ್ನು ಆಹ್ವಾನಿಸಲಾಗಿತ್ತು. ನಿಜಲಿಂಗಪ್ಪನವರು, ಬಸವಲಿಂಗಪ್ಪನವರ ವಿದ್ಯಾಭ್ಯಾಸಕ್ಕಾಗಿ ಶ್ರೀಗಳು ಸಹಾಯಧನ ನೀಡಿ ಪ್ರೋತ್ಸಾಹಿಸಿರುತ್ತಾರೆ. ಶಿಕ್ಷಣ, ಆರೋಗ್ಯಕ್ಕೆ ಶ್ರೀಗಳು ಹೆಚ್ಚು ಒತ್ತು ನೀಡಿದ್ದರು ಎಂದು ಶ್ರೀಗಳ ಸೇವೆಯನ್ನು ಸ್ಮರಿಸಿದರು.

ಹಿರಿಯ ಪತ್ರಕರ್ತ ದೊಣೆಹಳ್ಳಿ ಗುರುಮೂರ್ತಿ ಆಶಯ ನುಡಿಗಳನ್ನಾಡಿ, 900 ವರ್ಷಗಳಿಂದ ಇಲ್ಲಿಯವರೆಗೆ ಕಲ್ಯಾಣದ ಬಸವಾದಿ ಶರಣರ ಆಶಯದ ರಥವನ್ನು ಎಳೆದುಕೊಂಡು ಬಂದಿದ್ದೇವೆ. ಅವರ ವಿಚಾರಗಳು ಸಮಾಜದಲ್ಲಿ ಎಷ್ಟರ ಮಟ್ಟಿಗೆ ಅನುಷ್ಠಾನಗೊಂಡಿವೆ ಎಂಬುದು ಯಕ್ಷಪ್ರಶ್ನೆಯಾಗಿದೆ. ಬಸವಾದಿ ಶರಣರ ತತ್ವಗಳನ್ನು ಸಮಾಜಕ್ಕೆ ತಲುಪಿಸುವ ಕಾರ್ಯಗಳು ನಡೆಯುತ್ತಿವೆ. ಇವರ ವಿಚಾರಗಳನ್ನು ನಡೆ-ನುಡಿಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ. ಕಾಯ, ವಾಚಾ, ಮನಸ್ಸು ಇಟ್ಟುಕೊಂಡವರು, ಶಿಕ್ಷಣ ಮತ್ತು ಸಾಮಾಜಿಕ ಕಾರ್ಯಗಳ ಮೂಲಕ ಸಮಾಜಕ್ಕೆ ಕೊಡುಗೆಯನ್ನು ಕೊಟ್ಟವರು ನಿಜವಾದ ಪ್ರಾತಃ ಸ್ಮರಣೀಯರು ಎಂದು ಬಣ್ಣಿಸಿದರು.

ಚಿತ್ರದುರ್ಗ ಜಿಲ್ಲೆ ತಿಪ್ಪೇರುದ್ರ ಸ್ವಾಮಿಗಳು ಎರಡು ಮಠಗಳು, ಏಳು ಕೆರೆಗಳನ್ನು ನಿರ್ಮಾಣ ಮಾಡಿದರು. ತಿಪ್ಪೇರುದ್ರ ಸ್ವಾಮಿಗಳ ಆದರ್ಶಗಳನ್ನು ಪ್ರತಿಯೊಬ್ಬರು ರೂಢಿಸಿಕೊಳ್ಳಬೇಕು. ವಚನ ಸಾಹಿತ್ಯವನ್ನು ತಲೆಯ ಮೇಲೆ ಹೊತ್ತು ಜನಮಾನಸಕ್ಕೆ ತಲುಪಿಸಿದ ವಚನ ಪಿತಾಮಹ ಫ.ಗು.ಹಳಕಟ್ಟಿಯವರ ಚಿಂತನೆಗಳನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕು. ಸುತ್ತೂರು ಸಂಸ್ಥಾನ ಕೆಳಮಟ್ಟದ ಜನರಿಗೆ ಆಶ್ರಯ, ಶಿಕ್ಷಣ ಹಾಗೂ ದಾಸೋಹವನ್ನು ನೀಡಿದ ಶ್ರೀಮಂತ ಮಠವಾಗಿದೆ. ಸಮ ಸಮಾಜದ ಕಡೆಗೆ ಕೊಂಡೊಯ್ಯುವ ಕೆಲಸ 12ನೇಯ ಶತಮಾನದ ಬಸವಾದಿ ಶರಣರದ್ದಾಗಿತ್ತು. ಈ ಕಾರ್ಯವನ್ನು ಅನುಷ್ಠಾನಕ್ಕೆ ತರದೇ ಹೋದರೆ ಶರಣ ಚಳುವಳಿಯ ಉದ್ದೇಶ ಈಡೇರದು ಎಂದು ನುಡಿದರು.

ವಿಜಯಪುರ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಡಾ. ಮಹಾಂತೇಶ ಬಿರಾದಾರ್, ಮೈಸೂರಿನ ಪ್ರೊ. ಮೊರಬದ ಮಲ್ಲಿಕಾರ್ಜುನ, ತುಮಕೂರು ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಪ್ರೊ.ಸಿದ್ದಗಂಗಪ್ಪ, ಹಿರಿಯ ಸಂಶೋಧಕ ಡಾ. ಬಿ.ರಾಜಶೇಖರಪ್ಪ, ಸಾಹಿತಿ ಡಾ.ಲೋಕೇಶ್ ಅಗಸನಕಟ್ಟೆ ಮಾತನಾಡಿದರು.

ಸಮ್ಮೇಳನಾಧ್ಯಕ್ಷರಾದ ಡಾ.ಸಿದ್ದರಾಮ ಬೆಲ್ದಾಳ ಶರಣರು, ದಾವಣಗೆರೆ ವಿರಕ್ತಮಠದ ಡಾ. ಬಸವಪ್ರಭು ಮಹಾಸ್ವಾಮಿಗಳು, ಗುರುಮಠಕಲ್ ಖಾಸಾ ಶ್ರೀ ಮುರುಘಾ ಮಠದ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮಿಗಳು, ಬಿಜಾಪುರ ಶ್ರೀ ಕೈವಲ್ಯನಾಥ ಸ್ವಾಮಿಗಳು ಶರಣ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಸಿ. ಸೋಮಶೇಖರ್, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಕೆ.ಎಂ.ವೀರೇಶ್, ಹರ ಗುರುಚರ ಮೂರ್ತಿಗಳು ಉಪಸ್ಥಿತರಿದ್ದರು.

ಡಾ.ಸಿ.ಸೋಮಶೇಖರ್ ರಚಿಸಿದ 'ಮಾತೆಂಬುದು ಜ್ಯೋತಿರ್ಲಿಂಗ' ಕೃತಿ ಲೋಕಾರ್ಪಣೆ ಮಾಡಲಾಯಿತು. ಬಾಪೂಜಿ ವಿದ್ಯಾಸಂಸ್ಥೆಯವರು ದೇವಮಾನವ ಸಿದ್ದೇಶ್ವರ ಶ್ರೀ ಕುರಿತು ರೂಪಕ ನಡೆಸಿಕೊಟ್ಟರು. ತೋಟಪ್ಪ ಉತ್ತಂಗಿ ಸಂಗಡಿಗರು ವಚನ ಪ್ರಾರ್ಥನೆ ಮಾಡಿದರು. ಕೆ.ಬಿ.ಪರಮೇಶ್ವರಪ್ಪ ಸ್ವಾಗತಿಸಿದರು. ಎಸ್. ಷಡಾಕ್ಷರಯ್ಯ ವಂದಿಸಿದರು.

13ನೇಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ನಿಮಿತ್ತ ತುಮಕೂರಿನ ಗಮಕಿ ಪೂರ್ಣಿಮಾ ವೆಂಕಟೇಶ್ ಹಾಗೂ ಗಮಕ ಕಲಾಶ್ರೀ ವಿದ್ವಾನ್ ಎಂ ಜಿ ಸಿದ್ಧರಾಮಯ್ಯನವರು ಶಿವಶರಣರ ವಾಚನ ವ್ಯಾಖ್ಯಾನ ಕಾರ್ಯಕ್ರಮ ನಡೆಸಿಕೊಟ್ಟರು.

# 'ಅಲೆಮಾರಿ' ಪ್ರಗತಿಗೆ ಕ್ರಮ ವಹಿಸಿ

(1ನೇ ಪುಟದಿಂದ) ಆದ್ಯತೆ ನೀಡಬೇಕು. ಬಡತನ, ವಲಸೆಯ ಕಾರಣಕ್ಕೆ ಮಕ್ಕಳಿಗೆ ಶಿಕ್ಷಣ ನೀಡಲು ಸಾಧ್ಯವಾಗದಿದ್ದರೆ, ಮಠಕ್ಕೆ ಸೇರಿಸಬೇಕು. ನಮ್ಮ ಮಠದ ವಿದ್ಯಾಕೇಂದ್ರಗಳಲ್ಲಿ ಉಚಿತವಾಗಿ ಶಿಕ್ಷಣ ನೀಡಲಾಗುವುದು ಎಂದು ತಿಳಿಸಿದರು.

ಭೂರಹಿತರಿಗೆ ಭೂಮಿ, ವಸತಿ ರಹಿತರಿಗೆ ಮನೆ ನಿರ್ಮಿಸಿಕೊಡಬೇಕು. ಸಮುದಾಯದ ಕಾಲೋನಿಗಳಿಗೆ ಕಾಂಕ್ರೀಟ್ ರಸ್ತೆ, ಶುದ್ಧ ನೀರು ಪೂರೈಕೆ ಸೇರಿದಂತೆ ಇನ್ನಿತರೆ ಮೂಲಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಮನವಿ ಮಾಡಿದರು. ಚಿತ್ರದುರ್ಗದ ಛಲವಾದಿ ಮಹಾಸಂಸ್ಥಾನದ ಬಸವನಾಗಿದೇವ ಸ್ವಾಮೀಜಿ ಮಾತನಾಡಿ, ಪೂರ್ವಜರ ಕಲೆಗಳನ್ನು ಭಿಕ್ಷೆ ಬೇಡಲು ಬಳಸಿಕೊಳ್ಳದೇ, ಪರಂಪರೆಯಾಗಿ ಉಳಿಸಿಕೊಳ್ಳಬೇಕು ಎಂದು ಹೇಳಿದರು.

ಹಾವು, ಕರಡಿ, ಗಿಳಿಗಳನ್ನು ಆಡಿಸುವ ಶಕ್ತಿ, ಕೌಶಲ್ಯ ಹೊಂದಿರುವ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿಗೆ ಜನಪ್ರತಿನಿಧಿಗಳನ್ನೂ ಆಡಿಸುವ ಶಕ್ತಿ ಇದೆ ಹಾಗಾಗಿ ಈ ಸಮುದಾಯವನ್ನು ಕಡೆಗಣಿಸಬಾರದು ಎಂದು ಎಚ್ಚರಿಕೆ ನೀಡಿದರು.

ಶಾಸಕ ಕೆ.ಎಸ್.ಬಸವಂತಪ್ಪ ಮಾತನಾಡಿ, ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದ ಜನರು ಅಂಧಕಾರ, ಮೌಢ್ಯದಿಂದ ಹೊರ ಬರಬೇಕು. ಸಮಾಜದಲ್ಲಿ ಅತ್ಯಂತ ಕಟ್ಟಕಡೆಯ ಸ್ಥಾನದಲ್ಲಿರುವ ಅಲೆಮಾರಿ ಸಮುದಾಯದವರು ಕಾಯಕವನ್ನೇ ನೆಚ್ಚಿಕೊಂಡಿದ್ದಾರೆ. ಆದರೆ, ಅಜ್ಞಾನದಿಂದ ಇಂದಿಗೂ ಕೆಲವೆಡೆ ಮೌಢ್ಯ ಆಚರಿಸುತ್ತಿದ್ದಾರೆ. ಈ ಬಗ್ಗೆ ಸಮುದಾಯದ ಸ್ವಾಮೀಜಿಗಳು ಅರಿವು ಮೂಡಿಸುವ ಕಾರ್ಯ ಮಾಡಬೇಕು ಎಂದು ಮನವಿ ಮಾಡಿದರು.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರವೇಶಕ್ಕೆ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೇ ನೇರವಾಗಿ ಪ್ರವೇಶ ಕಲ್ಪಿಸಬೇಕು. ಪ್ರತಿಯೊಂದು ವಸತಿ ನಿಲಯದಲ್ಲೂ ಶೇ.5 ರಷ್ಟು ಸೀಟುಗಳನ್ನು ಈ ಸಮುದಾಯದ ವಿದ್ಯಾರ್ಥಿಗಳಿಗೆ ಮೀಸಲಿಡಬೇಕು ಎಂದು ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು ತಿಳಿಸಿದರು.

ಬೀದರ್‌ನ ಹೆಳವ ಸಮಾಜದ ಮುಕ್ತಿನಾಥ, ಜನಕಲ್ಯಾಣ ಟ್ರಸ್ಟ್ ಗುರುಪೀಠದ ಶಂಕರಲಿಂಗ ಸ್ವಾಮೀಜಿ ಮಾತನಾಡಿದರು.

ಈ ವೇಳೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಒಕ್ಕೂಟದ ಗೌರವಾಧ್ಯಕ್ಷ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು, ಅಧ್ಯಕ್ಷ ಎಂ. ಪ್ರಕಾಶ್, ಉಪಾಧ್ಯಕ್ಷ ಬಿ.ಕೆ. ನಾರಾಯಣ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಪ್ರತಾಪ್ ಕುಮಾರ ಜೋಗಿ, ಮಹಿಳಾ ಘಟಕದ ಅಧ್ಯಕ್ಷೆ ಎಂ.ವಿ ರಾಜೇಶ್ವರಿ, ಯುವ ಘಟಕದ ಅಧ್ಯಕ್ಷ ವೈ. ಕುಮಾರ, ಜಿಲ್ಲಾ ಘಟಕದ ಗೌರವಾಧ್ಯಕ್ಷ ತಿಪ್ಪೇಸ್ವಾಮಿ, ಗೋಂದಳಿ ಐಕ್ಯತಾ ವೇದಿಕೆ ಸಂಸ್ಥಾಪಕ ವೀರೇಶ್ ರಾವ್ ಪಾಚಂಗೆ, ವಿವಿಧ ಜಿಲ್ಲಾ ಘಟಕಗಳ ಪದಾಧಿಕಾರಿಗಳು ಇದ್ದರು.

**1924-2024**
ಬೆಳಗಾವಿ, ಕರ್ನಾಟಕ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗಾಂಧಿ ಭಾರತ

## ರಾಷ್ಟ್ರದ ಇಂದಿನ ಅಗತ್ಯವೆಂದರೆ, ಅದು...

ಗಾಂಧಿ ಆದರ್ಶಗಳನ್ನು **ಅನುಸರಿಸುವುದು**
ಗಾಂಧಿ ತತ್ವಗಳನ್ನು **ಅಳವಡಿಸಿಕೊಳ್ಳುವುದು**
ಗಾಂಧಿ ಕನಸನ್ನು **ನನಸಾಗಿಸುವುದು**



# ಗಾಂಧಿ ಭಾರತವನ್ನು
## ಮರುನಿರ್ಮಿಸಲು ನಮ್ಮೊಂದಿಗೆ ಕೈಜೋಡಿಸಿ

ಮಹಾತ್ಮ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ 1924 ರ ಬೆಳಗಾವಿ ಕಾಂಗ್ರೆಸ್ ಸಮಾವೇಶದ ಶತಮಾನೋತ್ಸವದ ಸ್ಮರಣಾರ್ಥವಾಗಿ **ಮಹಾತ್ಮ ಗಾಂಧೀಜಿ ಪ್ರತಿಮೆಯ** ಅನಾವರಣ ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ

**ಮಂಗಳವಾರ, ಜನವರಿ 21, 2025 | ಬೆಳಗ್ಗೆ 10.30 ಸುವರ್ಣ ವಿಧಾನಸೌಧ, ಬೆಳಗಾವಿ**



ಕರ್ನಾಟಕ ಮಾದರಿ ಆಡಳಿತವು ಗ್ಯಾರಂಟಿ ಯೋಜನೆಗಳನ್ನು ನೂರಕ್ಕೆ ನೂರರಷ್ಟು ಅನುಷ್ಠಾನಗೊಳಿಸುವ ಮೂಲಕ ಮಹಿಳೆಯರು, ಬಡವರು ಮತ್ತು ಶೋಷಿತವರ್ಗದವರನ್ನು ಸಬಲೀಕರಣಗೊಳಿಸುತ್ತಾ **'ಗಾಂಧಿ ಭಾರತ'**ವನ್ನು ಮರುನಿರ್ಮಿಸುವ ಕನಸನ್ನು ನನಸಾಗಿಸುವತ್ತ ಮುನ್ನಡೆಯುತ್ತಿದೆ.

ನಮ್ಮ ಕರ್ನಾಟಕ
**ಗ್ಯಾರಂಟಿ ಕರ್ನಾಟಕ**

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ — 10 kg
ಗೃಹಜ್ಯೋತಿ — ಪ್ರತಿ ಮನೆಗೆ 200
ಗೃಹಲಕ್ಷ್ಮಿ — ₹2000
ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬ್ರಾಹ್ಮಣ ಸಮುದಾಯ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ದೊಡ್ಡಬಾತಿಯಲ್ಲಿ ಇಂದಿನಿಂದ 3 ದಿನ ಉಡಿಸಲಮ್ಮನ ಸಂಭ್ರಮೋತ್ಸವ

ಮಾನವನು ಮೂಲದಲ್ಲಿ ಕಾಡಿನಲ್ಲಿದ್ದು, ಕಾಡು ಮನುಷ್ಯನಾಗಿ ಪ್ರಾಣಿ ಜೀವನದಂತೆ ನಡೆಸುತ್ತಿದ್ದುದು ಪ್ರಾಗೈತಿಹಾಸಿಕದ ಅವಲೋಕನದಿಂದ ತಿಳಿದುಬರುತ್ತದೆ. ಕಾಡಿನಲ್ಲಿ ಹಸಿಮಾಂಸ ಗೆಡ್ಡೆ ಗೆಣಸುಗಳನ್ನು ತಿನ್ನುತ್ತಾ, ಜೀವನ ಕ್ರಮದಲ್ಲಿ ಬದಲಾವಣೆ ಹೊಂದಿ, ಬೇಟೆಯಾಡುವು ದನ್ನು ಕಲಿತು, ಕ್ರಮೇಣ ಬೆಂಕಿಯ ಬಳಕೆಯಿಂದ ಹಸಿ ಮಾಂಸವನ್ನು ಬೇಯಿಸಿಕೊಂಡು ತಿನ್ನಲು ತೊಡಗಿ, ಬರ ಬರುತ್ತಾ ವಿಶಾಲವಾದ ಬಯಲು ಪ್ರದೇಶದಲ್ಲಿ ನೆಲೆನಿಂತು, ಮೊದಮೊದಲು ನಕ್ರಗಳಿಂದ ತದನಂತರ ಎತ್ತುಗಳ ಸಹಾಯದಿಂದ ಕೃಷಿಯಲ್ಲಿ ನಿರುತನಾದನು. ಹೀಗೆಯೇ ಬೇರೆ ಬೇರೆ ಕ್ಷೇತ್ರಗಳಲ್ಲಿ ಆಶ್ರಯ ತಾಣಗಳನ್ನು ನಿರ್ಮಿಸಿ ಕೊಂಡ ವಿಕಾಸದ ಪ್ರಥಮ ಹಂತವನ್ನು ಕಾಣುತ್ತೇವೆ.

ನಂತರ ಬೆಳವಣಿಗೆಯಾದಂತೆ ಸಾಂಘಿಕ ಜೀವನದಲ್ಲಿ ಆಸಕ್ತಿಯೊಂದಿ, ಕೌಟುಂಬಿಕ ಬದುಕನ್ನು ಪ್ರಾರಂಭಿಸಿ, ಅದ್ಭುತಗಳನ್ನು ಪೂಜಿಸತೊಡಗಿ, ಇವುಗಳೇ ದೇವರ ಸ್ವರೂಪಹೊಂದಿ ನಂಬಿದನು. ಕಾಲಾಂತರದಲ್ಲಿ ಆರಾಧನೆಯ ಹಿಂದಿರುವ ಭಯ-ಭಕ್ತಿಯ ಸ್ವರೂಪ ಹೊಂದಿ ದೈವ ಕಲ್ಪನೆ ಸ್ಥಿರತೆಯನ್ನು ಪಡೆದು, ದೇವರನ್ನು ಸೃಷ್ಟಿಸಿಕೊಂಡು ಪೂಜಿಸಲು ಪ್ರಾರಂಭಿಸಿದನು.

ಹೀಗೆಯೇ ಪೂಜಾ ವಿಧಾನಗಳ ತಳಹದಿಯ ಮೇಲೆ 'ನೀನು ನನ್ನನ್ನು ಉದ್ಧಾರ ಮಾಡಿದರೆ, ನಾನು ನಿನಗೆ ಪ್ರತಿಯಾಗಿ ಬಲಿಯನ್ನೋ ಅಥವಾ ಇನ್ನಾವುದನ್ನೋ ಕಾಣಿಕೆಯಾಗಿ ಅರ್ಪಿಸುವೆನು' ಎಂದು ತನ್ನ ಪ್ರಯೋಜಕ ದೃಷ್ಟಿಯಿಂದ ಪ್ರಾರ್ಥಿಸಿಕೊಂಡು, ಕಟ್ಟಳೆಗಳನ್ನು ನಿರ್ಮಿಸಿಕೊಂಡು, ಪಿತೃದೇವತಾ-ಮಾತೃ ದೇವತಾ ಪರಿಕರಗಳ ರೂಢಿಗೆ ಸರ್ವವಿಧಿತನಾದನು.

ಪ್ರಾಚೀನ ಕಾಲದಿಂದಲೂ ತಾಯಿಗೆ ದೇವತೆಯ ಸ್ಥಾನವನ್ನು ಅರ್ಪಿಸಿ, ಮಾತೃದೇವತಾ ಪದ್ಧತಿಯನ್ನು ರೂಢಿಸಿಕೊಂಡಿರುವುದನ್ನು ಕಾಣುತ್ತೇವೆ. ಪ್ರಕೃತಿಯ ಬಣ್ಣ ಕೆಂಪಾಗಿದುದ್ದರಿಂದ ಕುಂಕುಮ, ಕೆಂಪು ದಾಸವಾಳವೂ, ರಕ್ತವಸ್ತ್ರ, ರಕ್ತಫಲ ಮೊದಲಾದವುಗಳು ಪ್ರಿಯವೆಂದು ಭಾವಿಸಿ, ಅಲಂಕಾರಗೊಳಿಸಿ ಪೂಜಿಸ ತೊಡಗಿದನು. ಕಾಲಕ್ರಮೇಣ ಪ್ರಕೃತಿಯಲ್ಲಿಯ ಹುಟ್ಟು-ಸಾವುಗಳಿಗೆ 'ಹೆಣ್ಣೇ' ಕಾರಣ ಎಂಬ ಅಂಶ ಪ್ರಮುಖವಾಗಿ ಕಂಡಾಗ ಸರ್ವ ಸಹಕಾರ ಮೂರ್ತಿಯಾದ ಸ್ತ್ರೀಯನ್ನು ಮಾತೃದೇವತೆಯ ಸಂಕೇತವೆಂದು ಭಾವಿಸಿದನು. ಆದುದರಿಂದ ಸ್ತ್ರೀಯನ್ನು ಮಾಹಾಮಾತೆಯೆಂದು, ಸಾರ್ವಕಾಲಿಕ, ಕನ್ಯೆಯೆಂದು, ದಿವ್ಯಸತಿ, ಮಹಾಸಂಹಾರಿಣಿಯೆಂದು ಅತ್ಯಂತ ಗೌರವ ಸ್ಥಾನ ನೀಡಿ ಪೂಜಿಸುತ್ತಾ ಬಂದಿರುವುದು ಸತ್ಯಾಸತ್ಯವಾಗಿದೆ.

ಸಂಘ ಜೀವನ ಪ್ರಜ್ಞೆಯಿಂದ ಅನೇಕ ಬಗೆಯ ಸಂಸ್ಕಾರಗಳು ಮೂಡಿ ಬಂದುದರ ಫಲವಾಗಿ ಗ್ರಾಮ ದೇವತೆಗಳ ಉಗಮ ವಿಕಾಸವಾಯಿತು. ತನಗೆ ಇಷ್ಟಬಂದ ದೇವತೆಗಳ ನಾಮಕರಣ ಮಾಡಿಕೊಂಡು ಆರಾಧಿಸಲು ತೊಡಗಿದನು. ತನಗೆ ತೊಂದರೆಗಳಾದಾಗದ ನಿವಾರಣೆಗಾಗಿ ಸಣ್ಣ ಪುಟ್ಟ ದೇವತೆಗಳನ್ನು ನಿರ್ಮಿಸಿಕೊಡನು. ಇದರ ಪರಿಣಾಮವಾಗಿಯೇ ಇಂದು ಗ್ರಾಮಗಳಲ್ಲಿ ಊರಮ್ಮ, ಹಟ್ಟಿಯಮ್ಮ, ಕೇರಿಯಮ್ಮ, ದುರುಗಮ್ಮ, ಕೆಂಚಮ್ಮ, ಉಡಸಲಮ್ಮ, ಮಾರಿಯಮ್ಮ, ಕಾಳಮ್ಮ, ಕರಿಯಮ್ಮ ಇತ್ಯಾದಿ ಹೆಸರುಗಳನ್ನುಳ್ಳವಗಳಾಗಿ ಜಾತ್ರೆಗೆ, ಹರಕೆಗೆ ಪರಿಗಣಿತವಾದವು.

ಪ್ರದೇಶದ ವೈಶಿಷ್ಟ್ಯತೆಗನುಗುಣವಾಗಿ ದೇವತಾ ಕಾರ್ಯದಲ್ಲಿ ಭಕ್ತರು ಪಾಲ್ಗೊಳ್ಳುವಿಕೆ ಮತ್ತು ಅವರವರ ಸ್ಥಾನಕ್ಕೆ ಸರಿಯಾಗಿ ಅವರ ಆಚರಣೆಗಳು, ಕಾರ್ಯಗಳು ಬೇರೆ ಬೇರೆಯಾಗಿರುತ್ತವೆ. ಈ ಸೇವಾ ಕರ್ತವ್ಯಗಳ ಹಿಂದೆ ವೈಯಕ್ತಿಕವಾದ ಅಭೀಷ್ಟೆ, ಫಲಾಪೇಕ್ಷೆ ಅಡಗಿರುವುದನ್ನು ಕಾಣಬಹುದು. ಮಗುವಿನ ಜನನ, ಮಕ್ಕಳ ಜವಳ, ಮದುವೆ-ಮುಂಜಿ, ಬೀಜ ಬಿತ್ತುವಾಗ, ರಾಶಿ ಮಾಡುವಾಗ ಹೀಗೆ ಅನೇಕ ಸಂದರ್ಭಗಳಲ್ಲಿ ದೇವತೆಗೆ ಎಣ್ಣೆ ಬತ್ತಿಯನ್ನು ಕೊಡುವ ಸಂಪ್ರದಾಯ ಸಾಮನ್ಯವಾಗಿ ಕಂಡುಬರುತ್ತದೆ. ಹರಕೆಯನ್ನು ಆಚರಣೆಗೆ ತರುವುದರ ಮೂಲಕ ಒಂದು ಬಲವಾದ ಜನಪದ ಸಂಪ್ರದಾಯ ನಿರ್ಮಾಣವಾಗಿ ಎಲ್ಲಾ ವರ್ಗದವರು ಏಕತೆಯಿಂದ ಒಳಗೊಂಡು ಊರಿನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವಲ್ಲಿ ಗ್ರಾಮದೇವತೆಯ ಹಬ್ಬ ಆಚರಣೆಗೆ ಬಂದಿರುವುದನ್ನು ಕಾಣಬಹುದಾಗಿದೆ.

ಹಬ್ಬದ ಆಚರಣೆಯು ಬಹು ಸಂಪ್ರದಾಯ ಮತ್ತು ನಡೆ-ನುಡಿಯಿಂದ ಕೂಡಿರುತ್ತದೆ. ಊರಿನ ಹಿರಿಯರ ಸಮ್ಮುಖದಲ್ಲಿ ಕಿರಿಯರು ಭಾಗವಹಿಸಿ ನೆರವೇರಿಸುತ್ತಾರೆ. ಹನ್ನೆರಡು ಜನ ಆಯಗಾರರನ್ನೊಳಗೊಂಡು ಅಮ್ಮನ ಹಬ್ಬ ಪ್ರಾರಂಭವಾಗುತ್ತದೆ. ಊರಿನ ಜನಗಳ ಭಾವನೆಯಲ್ಲಿ ಉಡಸಲಮ್ಮ ಸಾಂಕ್ರಮಿಕ ರೋಗಗಳ ದೇವತೆಯೆಂದು, ರೋಗಗಳ ರೂಪದಲ್ಲಿ ಬರುವಳೆಂದು, ಬಂದ ಈ ರೋಗ ನಿವಾರಣೆಗೆ ಹಬ್ಬವೇ ಮೂಲವೆಂದು ಕಲ್ಪಿಸಿಕೊಳ್ಳಲಾಯಿತು. ಇದಕ್ಕೆ ಪ್ರತಿಯಾಗಿ ಈ ಉಡಸಲಮ್ಮ ಊರಲ್ಲೇ ಇರುವವಳು ಹಾಗೂ ಉಗ್ರ ದೇವತೆ ಎಂದು ಪರಿಗಣಿಸಿ, 'ಬಲಿ' ರೂಪದಲ್ಲಿ ಸಾಂಕೇತಿಸಲಾಯಿತು. ಇದರ ಜೊತೆಯಲ್ಲಿ ಈ ದೇವತೆಗೆ ಎಲ್ಲ ಜನಾಂಗದವರೂ ನಡೆದುಕೊಳ್ಳುತ್ತಾರೆ ಎಂಬ ಮಾತು ಜಾತಿಯನ್ನು ಪರಿಗಣಿಸದೆ ಸಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದರ ಸೂಚಕವಾಗಿರುತ್ತದೆ.

ಉಡಸಲಮ್ಮನ ಹಬ್ಬಕ್ಕೆ ಬಿಟ್ಟ ಕೋಣ ಯಾವ ಹೊಲವನ್ನು ಹೊಕ್ಕು ಮೇದರೂ ಹೊಡೆಯುವಂತಿಲ್ಲ. ಹಬ್ಬ 15 ದಿನ ಇರುವಾಗ ಮಾದಾರ ಮನೆಯವರು ಅದನ್ನು ಹಿಡಿದು 'ಕೋಣನ ಸಾರುವರು' ಅಂದರೆ ಹಬ್ಬ ಆರಂಭವಾದಂತೆ, ಮೆರವಣಿಗೆಯಲ್ಲಿ ಕೋಣ ಪ್ರತಿಯೊಬ್ಬರ ಮನೆಯ ಬಳಿಗೆ ಬಂದಾಗ ಅದರ ತಲೆಗೆ ಎಣ್ಣೆ ಹಾಕಿ, ಪೂಜಿಸಿ, ಅಕ್ಕಿ-ಬೇಳೆ-ಬೆಲ್ಲ- ತರಕಾರಿ- ಮೀಸಲುಡಿಗೆ ಕೊಡುವರು. ಊರ ತುಂಬಾ ಮೆರವಣಿಗೆಯಾದ ಮೇಲೆ ಪೂಜಾರಿ ಮೊದಲು ಪೂಜೆ ಮಾಡಿ, ಹೊಸ ಸೀರೆ ಉಡಿಸಿ, ಬೇವಿನ ಸೊಪ್ಪು ತೊಡಿಸಿ, ಕೊರೆ ಹಾಕಿ, ಶೃಂಗಾರ ಮಾಡಿ ಮೀಸಲು ನೈವೇದ್ಯ ಮಾಡಿದ ನಂತರ ಊರಲ್ಲಿ ಮೆರವಣಿಗೆ, ರಣವಾದ್ಯ, ಆಸಾದಿಗಳು ಬೈಯುವುದು ನಡೆಯುತ್ತದೆ. ಬೆಳಗಿನ ಜಾವದ ಹೊತ್ತಿಗೆ ಅಮ್ಮನನ್ನು ಗದ್ದುಗೆಗೆ ತರುವರು, ಮಂಗಳಾರತಿಯ ನಂತರ ಕೋಣವನ್ನು ಪೂಜೆ ಮಾಡಿ, ತಳಾರನು ಅಲಗು ಸೇವೆ ಮಾಡಿದ ಮೇಲೆ ಅದರ ದೇಹದಿಂದ ದೊರೆತ ಅಂಶವನ್ನು ಜೋಳದಲ್ಲಿ ಮಿಶ್ರಣಮಾಡಿ ಅದೇ ಊರಿನ ಜನರು ಊರ ಸುತ್ತ ಚರಗ ಚೆಲ್ಲುವರು, ಕೋಣನ ನೇಣವನ್ನು ತೆಗೆದು ತಲೆಯ ಮೇಲಿಟ್ಟು ಮುದ್ದೆಯ ಕಟ್ಟೆಕಟ್ಟಿ ದೀಪ ಹಚ್ಚುವರು, ಅದರ ಬಲಗಾಲು ಕಡಿದು ಬಾಯಲ್ಲಿಡುವರು. ಲೆಕ್ಕವಿಲ್ಲದಷ್ಟು ಕುರಿ, ಕೋಳಿಗಳು ಬಲಿಯಾಗುವವು, ಬೆಳ್ಳಿಯ ಮುಖ, ಸಣ್ಣಛತ್ರಿ, ಪಾದ, ಆಯುಧಗಳೆಲ್ಲಾ ಪೂಜೆಯ ನಂತರ ಮರುದಿನ ಸಂಬಂಧಪಟ್ಟ ಯಜಮಾನರು ತಮ್ಮ ಮನೆಯಲ್ಲಿ ತೆಗೆದಿಟ್ಟುಕೊಳ್ಳುವರು ಮತ್ತೆ ಅವು ಮುಂದಿನ ಹಬ್ಬಕ್ಕೆ ಹೊರಬರುವುದು.

ಕುಂಕುಮ, ಅರಿಶಿಣ, ಅಕ್ಕಿ ಇವುಗಳಿಂದ 'ರಂಗ'ಬರೆದು, ದೇವಿಗೆ ಕರಿಮಣಿ, ತಾಳಿ, ಬಿಳಿ ಮುತ್ತಿನ ಸರ, ಲಕ್ಕಿ ಎಲೆಗಳ ಪತ್ರಿ, ಹೂ ಮಾಲೆ, ರಂಗದ ಎದರು ಎಲೆ ಅಡಿಕೆ, ಬೆಲ್ಲ, ರೊಕ್ಕ, ದೇವಿಯ ಕಾಲುಗಳ ಮಧ್ಯೆ ಒಣ ಕೊಬ್ಬರಿ ಬಟ್ಟಲು, ಉತ್ತುತ್ತಿ, ಬೆಲ್ಲ, ಎದುರಿಗೆ ಅಕ್ಕಿಯ ಹುಗ್ಗಿಯ ಪ್ರಸಾದ, ಹರಕೆ, ದೇವಿನುಡಿ ಇತ್ಯಾದಿಗಳಿಂದ ಪೂಜೆ ಕೂಡಿರುತ್ತದೆ. ಅಮ್ಮನ ಜಾತ್ರೆ ಪ್ರಾರಂಭವಾದಾಗ ಯಾರೂ ಊರುಬಿಡುವಂತಿಲ್ಲ ಒಳಗೆ ಹುಲುಸು ಉಳಿಯಬೇಕೆಂಬ ಕಟ್ಟುಪಾಡು ನಿರ್ಬಂಧವಾಗಿರುತ್ತದೆ. ಆರತಿ, ಅಲಗುಸೇವೆ, ಉರುಳುಸೇವೆ, ಕಂಬಕೀಳುವುದು, ಸಾಗುಹಾಕುವುದು, ದೇವರತ್ತಿದ್ದುವುದು, ದೇವರತರುವುದು, ಉಪಾರ, ಭಂಡಾರ ಕಟ್ಟಿಸುವುದು, ಹೊಳೆಗೆ ಹೋಗುವುದು, ಪಟ್ಟಿ ಬರೆಯುವುದು, ಬಲಿ ಎರಚುವುದು, ಪೂಜೆ ಕಟ್ಟುವುದು, ಹರಾಜು ಮಾಡುವುದು, 'ಘಟ' ತರುವುದು, 'ಚೌಕಿಮನೆ'ಯ ಶ್ರೇಷ್ಠತೆ ಇತ್ಯಾದಿ ಸಂಪ್ರದಾಯಗಳು ಹಬ್ಬದಲ್ಲಿ ನಡೆಯುವುದು ಕ್ರಮಬದ್ಧವಾಗಿರುತ್ತದೆ.

ಗ್ರಾಮ ದೇವತೆಗಳಲ್ಲಿ ಕೆಲವನ್ನು ಕಾಯಿಲೆಯ ದೇವತೆಯೆಂದು ಕರೆಯುವರು, ಊಡಚವ್ವ, ಉಡಿಸಮ್ಮ, ಉಡಸಲಮ್ಮ, ಉಡುಸಲಮ್ಮನ ಸಂಪ್ರದಾಯ ಮಧ್ಯ ಮತ್ತು ಕರ್ನಾಟಕದಲ್ಲಿ ಆಚರಣೆಯಲ್ಲಿದೆ. 'ಉಡಿ' ಎಂದರೆ ಒಂದು ಬಗೆಯ ರೋಗ, ಉಣ್ಣು ರೋಗ, ಉಡಿಯಿಂದ ನಿಷ್ಪನ್ನಗೊಳ್ಳುವ ಉಡುಚು ಪದಕ್ಕೆ ತೊಡೆವಾಳು, ಸಂಕದಾಳು, ಕೀವುಉಣ್ಣು, ಕಂಕಳು ತೊಡೆಗಳ ಮಧ್ಯ ಏಳುವ ಬಕ್ಕೆಗಳು ಎಂದರ್ಥವಿದೆ. ಇದು ಒಂದು ಬಗೆಯ ಗುಹ್ಯ ರೋಗವೆಂದು ಅರ್ಥೈಸಿದೆ. ಉಡುಚಮ್ಮ ರೋಗಗಳ, ಅದರಲ್ಲೂ ಗುಹ್ಯ ಅಥವಾ ಲೈಂಗಿಕ ರೋಗಗಳ ದೇವತೆ ಮತ್ತು ನಿವಾರಣೆಯ ಶಕ್ತಿ ದೇವತೆ ಎಂಬ ಪ್ರತೀತಿಯಿದೆ. ಶಾಸನಗಳಲ್ಲಿಯೂ ಪ್ರಸ್ತಾಪವಿದೆ. ಕೆಲವು ಗ್ರಾಮಗಳಲ್ಲಿ ತಿಪ್ಪೆಗಳ ಮಧ್ಯ ಈ ಗುಡಿಗಳು ಇರುವುದನ್ನು ಕಾಣಬಹುದು. ಹೀಗೆ ಈ ದೇವತೆ ಜನ, ದನ, ಮಕ್ಕಳಿಗೆ ಕಾಯಿಲೆ ಕಸಾಲೆಯಾದರೆ ಹರಸಿಕೊಳ್ಳುವ ಮತ್ತು ಕಲ್ಯಾಣದ ಒಂದು ದೇವತೆಯಾಗಿ ಗ್ರಾಮಗಳಲ್ಲಿ ನೆಲೆಸಿದ್ದಾಳೆ. ಆದಕಾರಣ ಊರಿನವರು 3 ವರ್ಷಕ್ಕೊಮ್ಮೆಯೋ 6 ವರ್ಷಕ್ಕೊಮ್ಮೆಯೋ ಹಬ್ಬ ಆಚ ರಿಸುವುದರಲ್ಲಿ ತೊಡಗಿರುವುದು ಜನಪದ ಸಂಪ್ರದಾಯದ ಒಂದು ಆದ್ಯ ಕರ್ತವ್ಯವಾಗಿದೆ.



- ಪ್ರೊ. ಬಾತಿ ಬಸವರಾಜ್,
ಶೈಕ್ಷಣಿಕ ಸಲಹೆಗಾರರು,
ದವನ್ ಕಾಲೇಜು, ದಾವಣಗೆರೆ.

# ಜಾಗತಿಕವಾಗಿ ಸ್ಥಿರ ಬೆಳವಣಿಗೆ ಆದರೂ ಬಡತನ ನಿವಾರಿಸಲು ಸಾಲದು : ವಿಶ್ವ ಬ್ಯಾಂಕ್

ವಾಷಿಂಗ್ಟನ್, ಜ.19- ಜಾಗತಿಕ ಆರ್ಥಿಕ ಬೆಳವಣಿಗೆ ಸ್ಥಿರವಾಗಿದೆ. ಆದರೂ ಇದು ಬಡತನ ನಿವಾರಿಸುವಷ್ಟು ವೇಗವಾಗಿಲ್ಲ ಎಂದು ವಿಶ್ವ ಬ್ಯಾಂಕ್ ತನ್ನ ಇತ್ತೀಚಿನ ಜಾಗತಿಕ ಆರ್ಥಿಕ ಸಮೀಕ್ಷೆಯಲ್ಲಿ ತಿಳಿಸಿದೆ.

2025ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ 2.7 ರಷ್ಟಿರಲಿದೆ ಹಾಗೂ 2026ರಲ್ಲೂ ಇದೇ ರೀತಿಯ ಬೆಳವಣಿಗೆ ಇರಲಿದೆ. 2023 ಹಾಗೂ 24ರ ನಂತರ ಸ್ಥಿರ ಬೆಳವಣಿಗೆ ಕಂಡು ಬರುತ್ತಿದೆ. ಆದರೆ 2010 - 2019ರ ಅವಧಿಗೆ ಹೋಲಿಸಿದರೆ ಬೆಳವಣಿಗೆ ಸರಾಸರಿ 0.4 ರಷ್ಟು ಕಡಿಮೆ ಇದೆ. ಕೊರೊನಾ ಹಾಗೂ ಯುದ್ಧಗಳ ಕಾರಣದಿಂದಾಗಿ ಇತ್ತೀಚಿನ ವರ್ಷಗಳಲ್ಲಿ ಬೆಳವಣಿಗೆ ದರ ಕಡಿಮೆಯಾಗಿದೆ.

ಆದರೆ ಎರಡು ವರ್ಷಗಳ ಹಿಂದೆ ಶೇಕಡ 8ರಷ್ಟು ಇದ್ದ ಜಾಗತಿಕ ಹಣದುಬ್ಬರ ದರ ಈಗ ಕಡಿಮೆಯಾಗಿದೆ. 2025 ಹಾಗೂ 2026ರಲ್ಲಿ ಹಣದುಬ್ಬರ ಸರಾಸರಿ 2.7 ರಷ್ಟಿರಲಿದೆ. ಇದು ಬಹುತೇಕ ಕೇಂದ್ರ ಬ್ಯಾಂಕುಗಳ ಅಪೇಕ್ಷಿತ ಮಟ್ಟವಾಗಿದೆ ಎಂದು ಗ್ಲೋಬಲ್ ಎಕನಾಮಿಕ್ಸ್ ಪ್ರಾಸ್ಪೆಕ್ಟ್ಸ್ ವರದಿಯಲ್ಲಿ ತಿಳಿಸಲಾಗಿದೆ.

2025ರಲ್ಲಿ ಅಭಿವೃದ್ಧಿಶೀಲ ದೇಶಗಳ ಆರ್ಥಿಕ ಬೆಳವಣಿಗೆ ದರ ಶೇ. 4.1 ಹಾಗೂ 2026ಲ್ಲಿ ಶೇ. 4ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ. ಆದರೆ ಈ ಬೆಳವಣಿಗೆ ದರವು ಜಾಗತಿಕವಾಗಿ ಬಡತನ ನಿವಾರಿಸಲು ಸಮರ್ಪಕವಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. 2010ರ ವರ್ಷದಲ್ಲಿ ಅಭಿವೃದ್ಧಿಶೀಲ ದೇಶಗಳ ಬೆಳವಣಿಗೆ ದರ ಶೇಕಡಾ 5.1ರಷ್ಟಿತ್ತು. 2020ರಲ್ಲಿ ಇದು ಕೇವಲ ಶೇಕಡಾ 3.5ರ ಹಂತಕ್ಕೆ ತಲುಪಿದೆ



ಎಂದು ವಿಶ್ವ ಬ್ಯಾಂಕ್ ಹೇಳಿದೆ.

ಭಾರತ ಹಾಗೂ ಚೀನಾ ಹೊರತುಪಡಿಸಿದರೆ ಉಳಿದ ಎಲ್ಲಾ ಅಭಿವೃದ್ಧಿಶೀಲ ದೇಶಗಳು ತಲಾ ವರಮಾನ ಹೆಚ್ಚಳದಲ್ಲಿ ಹಿಂದೆ ಬಿದ್ದಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಹೂಡಿಕೆಯ ಕೊರತೆ, ಹೆಚ್ಚಿನ ಸಾಲದ ಹೊರೆ, ಪರಿಸರ ಬದಲಾವಣೆಯ ವೆಚ್ಚ ಏರಿಕೆ ಹಾಗೂ ರಕ್ಷಣಾತ್ಮಕ ನೀತಿಗಳ ಕಾರಣದಿಂದಾಗಿ ರಫ್ತಿಗೆ ಅಡ್ಡಿಯಾಗುತ್ತಿದೆ. ಈ ಎಲ್ಲಾ ಸಮಸ್ಯೆಗಳು ಸದ್ಯಕ್ಕೆ ಬಗೆಹರಿಯುವ ಯಾವುದೇ ಸೂಚನೆ ಇಲ್ಲ.

ಕಳೆದ 25 ವರ್ಷಗಳಿಗೆ ಹೋಲಿಸಿದರೆ, ಮುಂದಿನ 25 ವರ್ಷಗಳು ಅಭಿವೃದ್ಧಿಶೀಲ ದೇಶಗಳಿಗೆ ಕಠಿಣ ಹಾದಿಯಾಗಿದೆ ಎಂದು ವಿಶ್ವ ಬ್ಯಾಂಕ್ ಮುಖ್ಯ ಆರ್ಥಿಕ ಪರಿಮಿತ ಇಂದರ್ಮಿತ್ ಗಿಲ್ ತಿಳಿಸಿದ್ದಾರೆ.

ವಿಶ್ವದ ಅತ್ಯಂತ ಬಡ ದೇಶಗಳಲ್ಲಿ ಸರಾಸರಿ ತಲಾ ವರಮಾನ,1145 ಡಾಲರ್‌ಗಿಂತಲೂ ಕಡಿಮೆ ಇದೆ. 2024ರಲ್ಲಿ ತಲಾ ವರಮಾನ ಶೇಕಡಾ 3.6 ರಷ್ಟು ಮಾತ್ರ ಹೆಚ್ಚಾಗಿದೆ. ಹಲವು ದೇಶಗಳಲ್ಲಿ ನಡೆದಿರುವ ಘರ್ಷಣೆ ಹಾಗೂ ಹಿಂಸಾಚಾರದಿಂದಾಗಿ ಬೆಳವಣಿಗೆಗೆ ಅಡ್ಡಿಯಾಗಿದೆ. ಯುರೋಪ್ ಮಧ್ಯಪ್ರಾಚ್ಯ ಹಾಗೂ ಆಫ್ರಿಕಾಗಳಲ್ಲಿ ಪೂರ್ಣ ಪ್ರಮಾಣದ ಯುದ್ಧಗಳು ಸಂಭವಿಸಿವೆ. ಸಂಘರ್ಷಗಳು ಆರ್ಥಿಕತೆಗೆ ತೀವ್ರ ಹಾನಿ ತರುತ್ತವೆ ಎಂದು ಗಿಲ್ ವಿಶ್ವ ಬ್ಯಾಂಕ್ ವರದಿಯಲ್ಲಿ ತಿಳಿಸಿದ್ದಾರೆ.

ಈ ವರ್ಷ ಕಡಿಮೆ ಆದಾಯದ ದೇಶಗಳು 5.7 ಹಾಗೂ 2026ರಲ್ಲಿ 5.9ರ ಬೆಳವಣಿಗೆ ಕಾಣಲಿವೆ ಎಂದು ವಿಶ್ವ ಬ್ಯಾಂಕ್ ಅಂದಾಜಿಸಿದೆ.

ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾದ ಅಮೆರಿಕದಲ್ಲಿ 2.3ರ ಬೆಳವಣಿಗೆ ಕಂಡು ಬರಲಿದೆ. 2024ರಲ್ಲಿ ಅಮೆರಿಕದ ಆರ್ಥಿಕ ಬೆಳವಣಿಗೆ ಶೇಕಡ 2.8ರಷ್ಟಿತ್ತು. ಹೆಚ್ಚಿನ ಬಡ್ಡಿ ದರದ ನಡುವೆಯೂ ಅಮೆರಿಕದ ಆರ್ಥಿಕತೆ ಉತ್ತಮವಾಗಿ ಕಾರ್ಯನಿರ್ವಹಿಸಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮತ್ತೊಂದೆಡೆ ಯುರೋ ಮಂದಗತಿಯ ಬೆಳವಣಿಗೆ ಕಾಣುತ್ತಿದೆ. ಯುರೋಪ್ ವಲಯದ ಇಪ್ಪತ್ತು ದೇಶಗಳು ಈ ವರ್ಷ ಶೇಕಡ 1ರಷ್ಟು ಮಾತ್ರ ಬೆಳವಣಿಗೆ ಕಾಣಲಿವೆ ಎಂದು ಅಂದಾಜಿಸಲಾಗಿದೆ.

ವಿಶ್ವದ ಎರಡನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯಾದ ಚೀನಾ ಶೇಕಡಾ ನಾಲ್ಕರ ಬೆಳವಣಿಗೆ ಕಾಣಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಕಳೆದ ವರ್ಷ 4.9ರ ಬೆಳವಣಿಗೆ ಆಗಿತ್ತು.

ಭಾರತ ಈ ವರ್ಷ ಶೇಕಡ 6.7ರ ಬೆಳವಣಿಗೆ ಕಾಣಲಿದೆ ಹಾಗೂ 2026ಲ್ಲೂ ಇದೇ ರೀತಿಯ ಬೆಳವಣಿಗೆ ಇರಲಿದೆ ಎಂದು ವರದಿ ತಿಳಿಸಿದೆ. ಕೃಷಿ ಉತ್ಪನ್ನ ಹೆಚ್ಚಳವು ಗ್ರಾಮೀಣ ಭಾಗದಲ್ಲಿ ಆರ್ಥಿಕ ಬೆಳವಣಿಗೆ ತರುತ್ತಿದೆ. ಆದರೆ, ಹಣದುಬ್ಬರ ಹಾಗೂ ಸಾಲ ಬೆಳವಣಿಗೆ ಮಂದವಾಗಿರುವುದು ನಗರಗಳಲ್ಲಿ ಬೆಳವಣಿಗೆಗೆ ತೊಡಕಾಗಿದೆ ಎಂದು ವರದಿ ತಿಳಿಸಿದೆ.

# ವಿನೋಬನಗರದ ಪಾಳು ಬಿದ್ದ ಬಾವಿ ಮುಚ್ಚುವಂತೆ ಆಗ್ರಹ

ದಾವಣಗೆರೆ, ಜ.19- ಇಲ್ಲಿನ ವಿನೋಬ ನಗರದ 4ನೇ ಮುಖ್ಯ ರಸ್ತೆ, 4ನೇ ಅಡ್ಡ ರಸ್ತೆಯಲ್ಲಿ ಪಾಳು ಬಿದ್ದ ಅನುಪಯುಕ್ತ ಬಾವಿಯನ್ನು ಮುಚ್ಚುವಂತೆ ಇಲ್ಲಿನ ಸಾರ್ವಜನಿಕರು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಿದ್ದಾರೆ.

ಅಲ್ಲಿನ ನಿವೃತ್ತ ಪೊಲೀಸ್ ಅಧಿಕಾರಿ ರಹಮಾನ್‌ಖಾನ್ ಅವರ ಮನೆ ಬಳಿ ಇರುವ ಬಾವಿಯು ನಿಷ್ಪ್ರಯೋಜಕವಾಗಿದ್ದು, ಸುತ್ತಲಿನ ಜನರು ಇಲ್ಲಿ ಕೊಳೆತ ತರಕಾರಿ, ಕಸವನ್ನು ತಂದು ಸುರಿಯುತ್ತಿದ್ದರಿಂದ ಇಲ್ಲಿ ಸೂಸುವ ದುರ್ವಾಸನೆ ಸಾಂಕ್ರಾಮಿಕ ರೋಗಕ್ಕೆ ಆಮಂತ್ರಣ ನೀಡುತ್ತಿದೆ. ಬಾವಿಯ ಸುತ್ತಲೂ ಬಿದ್ದಿರುವ ಹರಕಲು ಬಟ್ಟೆ ಹಾಗೂ ಕಸ-ಮುಸರಿಯಂತಹ ಕೊಳಕು ಕಸಕ್ಕೆ ಬೀದಿ ನಾಯಿಗಳು ಮತ್ತು ಹಂದಿಗಳು ಮುಗಿ ಬಿದ್ದಿರುತ್ತವೆ.

ಕಸವನ್ನು ರಸ್ತೆಗೆ ಎಳೆದು ತರುವ ಬೀದಿ ನಾಯಿ ಮತ್ತು ಹಂದಿಗಳು ಕೆಲವೊಮ್ಮೆ ನಾಗರಿಕರ ಮೇಲೂ ದಾಳಿ ನಡೆಸಿ ಕಚ್ಚಿ ಗಾಯಗೊಳಿಸಿವೆ. ಮಕ್ಕಳು, ವೃದ್ಧರು ರಸ್ತೆಯಲ್ಲಿ ನಡೆದಾಡಲು ಭಯ ಬೀಳುತ್ತಿದ್ದಾರೆ.

ನಗರದ ಸ್ವಚ್ಛತೆ ಹಾಗೂ ಇಲ್ಲಿನ ನಿವಾಸಿಗಳ ಹಿತದೃಷ್ಟಿಯಿಂದಾಗಿ ಅಹಿತಕರ ಘಟನೆ ಸಂಭವಿಸುವ ಮೊದಲೇ, ಮಹಾನಗರ ಪಾಲಿಕೆ ಇತ್ತ ಗಮನ ಹರಿಸಿ, ಅದನ್ನು ಮುಚ್ಚುವ ಕೆಲಸ ಮಾಡಬೇಕಿದೆ ಎಂದಿದ್ದಾರೆ.

ಪಾಳು ಬಿದ್ದ ಬಾವಿಯನ್ನು ಮುಚ್ಚದೇ ನಿರ್ಲಕ್ಷ್ಯ ವಹಿಸಿದರೆ, ಮುಂದಿನ ದಿನಗಳಲ್ಲಿ ಇಲ್ಲಿ ಯಾವುದೇ ಅಪಾಯ ಸಂಭವಿಸಿದರೂ ಅದರ ಹೊಣೆಗಾರಿಕೆ ಯನ್ನು ಪಾಲಿಕೆ ವಹಿಸಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

# ಜಲ ಸಂರಕ್ಷಣೆಯಲ್ಲಿ ಸಿದ್ದರಾಮೇಶ್ವರರ ಕಾರ್ಯ ಸ್ಮರಣೀಯ

ಕೊಟ್ಟೂರು, ಜ.19- ಪಟ್ಟಣದ ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ಬುಧವಾರ ಶಿವಯೋಗಿ ಸಿದ್ದರಾಮೇಶ್ವರರ ಜಯಂತಿ ಆಚರಣೆ ಮಾಡಲಾಯಿತು.




ಕಾರ್ಯಕ್ರಮದಲ್ಲಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ತಹಶೀಲ್ದಾರ್ ಜಿ.ಕೆ. ಅಮರೇಶ್ ಮತ್ತು ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ಜಿ.ಕೆ. ಅಮರೇಶ್ ಮಾತನಾಡಿ, ಹನ್ನೆರಡನೇ ಶತಮಾನದ ಸಿದ್ದರಾಮೇಶ್ವರರು, ಪಶು-ಪ್ರಾಣಿ ಹಾಗೂ ಜನರಿಗೆ ಕುಡಿಯುವ ನೀರು ದೊರಕಿಸಬೇಕೆನ್ನುವ ಕನಸು ಕಂಡಿದ್ದರು. ಈ ನಿಟ್ಟಿನಲ್ಲಿಯೇ ಅವರು ಅಂದೇ ಕೆರೆ-ಕಟ್ಟೆಗಳನ್ನು ನಿರ್ಮಿಸಿ ಸಮಾಜ ಮುಖಿ ಕಾರ್ಯ ಮಾಡಿದ್ದರು ಎಂದು ಸ್ಮರಿಸಿದರು.

ಬಸವಣ್ಣನವರ ಮುಂದಾಳತ್ವದಲ್ಲಿ ಕಲ್ಯಾಣದಲ್ಲಿ ನಡೆದ ಸಾಮಾಜಿಕ ಕ್ರಾಂತಿಯಲ್ಲಿ ಸಿದ್ದರಾಮೇಶ್ವರರು ಭಾಗವಹಿಸಿ, ಅನೇಕ ವಚನಗಳನ್ನು ರಚಿಸುವ ಮೂಲಕ ಸಮಾಜದ ಅಂಕು-ಡೊಂಕುಗಳನ್ನು ತಿದ್ದಲು ಶ್ರಮಿಸಿದ್ದರು ಎಂದು ತಿಳಿಸಿದರು.

ಭೋವಿ ಸಮುದಾಯ ಸಂಘಟಿತವಾಗ ಬೇಕು. ಈ ಸಮುದಾಯದ ಮಕ್ಕಳು ಶಿಕ್ಷಣವಂತರಾಗಬೇಕು ಎಂದು ಕಾಂಗ್ರೆಸ್ ಮುಖಂಡ ಡಾ. ತಿಪ್ಪೇಸ್ವಾಮಿ ಹೇಳಿದರು.

ಕಾರ್ಯಕ್ರಮದಲ್ಲಿ ಗ್ರೇಡ್-2 ತಹಶೀಲ್ದಾರ್ ಎಂ. ಪ್ರತಿಭಾ, ಉಪತಹಶೀಲ್ದಾರ್ ಅನ್ನದಾನೇಶ ಬಿ. ಪತ್ತಾರ್, ತಾಲ್ಲೂಕು ಭೋವಿ ಸಮಾಜದ ಅಧ್ಯಕ್ಷ ಹುಲುಗಪ್ಪ, ಕೃಷಿಕ ಸಮಾಜದ ಅಧ್ಯಕ್ಷ ಡಿ. ನಾಗೇಶ್, ಪಿ.ಹೆಚ್ ದೊಡ್ಡರಾಮಣ್ಣ, ಪಿ.ಹೆಚ್ ರಾಘವೇಂದ್ರ, ಪಿ.ಹೆಚ್ ಅಂಜಿನಪ್ಪ, ಪಿ.ಕೆ ರವಿಕುಮಾರ್ ಇತರರು ಇದ್ದರು.

# ಸಂಸ್ಕೃತಿ-ಸಂಸ್ಕಾರದಿಂದ ವ್ಯಕ್ತಿತ್ವ ವೃದ್ಧಿ



ಮಲೇಬೆನ್ನೂರು, ಜ.19- ವಿದ್ಯಾರ್ಥಿಗಳ ಪ್ರತಿಭೆಗೆ ಸಂಸ್ಕೃತಿ-ಸಂಸ್ಕಾರ ದೊರೆತರೆ, ಅವರ ವ್ಯಕ್ತಿತ್ವ ಬೆಳಗುತ್ತದೆ ಎಂದು ನಿವೃತ್ತ ಶಿಕ್ಷಕ ಎಸ್. ಹೆಚ್. ಹೂಗಾರ್ ಹೇಳಿದರು.

ಪಟ್ಟಣದ ಜಿಗಳಿ ರಸ್ತೆಯಲ್ಲಿರುವ ರಾಜ ರಾಜೇಶ್ವರಿ ಆಂಗ್ಲ ಮಾಧ್ಯಮ ವಿದ್ಯಾ ಸಂಸ್ಥೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಂಸ್ಥೆಯ 19ನೇ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು ಮತ್ತು ಪಾಲಕರು ಮಕ್ಕಳ ಕಲಿಕೆಗೆ ಹಾಗೂ ಪ್ರತಿಭೆಗೆ ಪೂರಕ ವಾತಾವರಣ ಕಲ್ಪಿಸ ಬೇಕು. ವಿದ್ಯಾರ್ಥಿಗಳು ಎಷ್ಟೇ ಜ್ಞಾನ ಸಂಪಾದಿ ಸಿದರೂ ಅಹಂಕಾರ ಬೆಳೆಸಿಕೊಳ್ಳದೇ, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಇಂದಿನ ಮಕ್ಕಳು ಸಮಾಜದ ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡುವ ಜತೆಗೆ ಕನ್ನಡ

**ಎಸ್.ಹೆಚ್. ಹೂಗಾರ್**

ನಾಡು-ನುಡಿಯ ಕೀರ್ತಿಯನ್ನು ಬೆಳೆಸಬೇಕು ಎಂದು ಕಿವಿ ಮಾತು ಹೇಳಿದರು.

ಶಾಲೆಯ ವಿದ್ಯಾರ್ಥಿಗಳಿಂದ ಕರಾಟೆಯ ಸಾಹಸ ಹಾಗೂ ವಿವಿಧ ಬಗೆಯ ನೃತ್ಯಗಳು ಪ್ರದರ್ಶನಗೊಂಡವು. ವಿದ್ಯಾರ್ಥಿಗಳಾದ ಭರತ್ ಮತ್ತು ನಿದಾಸಮ್ರೀನ್ ನಿರೂಪಿಸಿದರು.

ಈ ವೇಳೆ ಬೆಳ್ಳೂಡಿ ಚಂದ್ರಗುಪ್ತ ಮೌರ್ಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ನಿಂಗಪ್ಪ, ಆಡಳಿತಾಧಿಕಾರಿ ಡಾ. ಶೃತಿ ಇನಾಂದಾರ್, ಇಂಜಿನಿಯರ್ ಯು.ಆರ್. ಗಣೇಶ್, ರಾಜೇಶ್ವರಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಶಿವಾನಂದಪ್ಪ, ಪ್ರಾಚಾರ್ಯೆ ಜಿ.ಓ ಸುಜಾತ ಹಾಗೂ ಮುಖ್ಯಶಿಕ್ಷಕ ಎಸ್. ಶಶಿಧರ ಇದ್ದರು.

# ಸೇವಾಲಾಲ್ ಜಯಂತಿ ನಗರದಲ್ಲಿ ಇಂದು ಸಭೆ

ನ್ಯಾಮತಿ ತಾಲ್ಲೂಕು ಸೂರಗೊಂಡನಕೊಪ್ಪ ದಲ್ಲಿ ಫೆ.13 ರಿಂದ 15 ರವರೆಗೆ ನಡೆಯುವ ರಾಜ್ಯ ಮಟ್ಟದ ಶ್ರೀ ಸಂತ ಸೇವಾಲಾಲ್ ಮಹಾರಾಜರ 286ನೇ ಜನ್ಮ ದಿನಾಚರಣೆ ಪ್ರಯುಕ್ತ ಜಾತ್ರಾ ಮಹೋತ್ಸವ ಆಚರಣೆಯ 1ನೇ ಪೂರ್ವಭಾವಿ ಸಭೆಯನ್ನು ಕರ್ನಾಟಕ ವಿಧಾನಸಭೆಯ ಉಪಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ನಾಗರಾಜ ತಿಳಿಸಿದ್ದಾರೆ.

# ಅದಾನಿ ಎನರ್ಜಿ ಸಲ್ಯೂಷನ್ಸ್ ಬೇಡಿಕೆ 54,700 ಕೋಟಿ ರೂ.ಗಳಿಗೆ ಏರಿಕೆ

ನವದೆಹಲಿ, ಜ. 19- ದೇಶದ ಅತಿ ದೊಡ್ಡ ವಿದ್ಯುತ್ ಸರಬರಾಜು ಕಂಪನಿ ಆಗಿರುವ ಅದಾನಿ ಎನರ್ಜಿ ಸಲ್ಯೂಷನ್ಸ್ ಬೇಡಿಕೆ 54,700 ಕೋಟಿ ರೂ.ಗಳಿಗೆ ಹೆಚ್ಚಾಗಿದೆ. ಇದು ಏಪ್ರಿಲ್ 2024ಕ್ಕೆ ಹೋಲಿಸಿದರೆ ಮೂರು ಪಟ್ಟು ಹೆಚ್ಚಾಗಿದೆ. ಕಂಪನಿಯು ರಾಜಸ್ಥಾನದಲ್ಲಿ 28,455 ಕೋಟಿ ರೂ.ಗಳ ವಿದ್ಯುತ್ ವಿತರಣೆ ಯೋಜನೆಗಳನ್ನು ಪಡೆದಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ.

# ಎಂ.ಹೆಚ್. ಗೌಡ ನಿಧನಕ್ಕೆ ಸಂತಾಪ

ದಾವಣಗೆರೆ, ಜ.19- ಪಿಎಲ್‌ಡಿ ಬ್ಯಾಂಕ್ ನಿವೃತ್ತ ಕಾರ್ಯದರ್ಶಿಗಳೂ, ಹಲವಾರು ಸಹಕಾರ ಸಂಘಗಳನ್ನು ಹುಟ್ಟು ಹಾಕಿರುವ ಸಹಕಾರಿ ಧುರೀಣರೂ ಆದ ಎಂ.ಹೆಚ್. ಗೌಡ (ಹನುಮಂತಗೌಡ) ಅವರ ನಿಧನಕ್ಕೆ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ರೈತ ಮುಖಂಡರುಗಳಾದ ಶಾಮನೂರು ಹೆಚ್.ಆರ್. ಲಿಂಗರಾಜ್, ಎನ್.ಜಿ. ಪುಟ್ಟಸ್ವಾಮಿ, ಕೂಲಂಬಿ ಶಂಕರಮೂರ್ತಿ ಸಂತಾಪ ವ್ಯಕ್ತಪಡಿಸಿದ್ದಾರೆ.


**ಸೈಟುಗಳು ಮಾರಾಟಕ್ಕಿವೆ**
ತರಳಬಾಳು ಕೃಷಿ ಹಿಂಭಾಗ ವಿನಾಯಕ ಬಡಾವಣೆಯಲ್ಲಿ 30x54 North, 30x70 North, 30x40 North, 30x50 East-South Corner.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಔಟ್‌ನಲ್ಲಿ 40x62, 40x62 East ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x50, 30x50 West ಅಕ್ಕ-ಪಕ್ಕ, 30x40 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗದಲ್ಲಿ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್ ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ ರೋಡ್ ಅಶ್ವಿನಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಹತ್ತಿರ ಹೊಸ ಲೇಔಟ್ 30x55 ಉತ್ತರ, ಪೂರ್ವ, ಪಶ್ಚಿಮ ಎಲ್ಲಾ ದಿಕ್ಕುಗಳು ಲಭ್ಯವಿದೆ.
ರೇಟ್ : 2600/-
ಸಂಪರ್ಕಿಸಿ. ಚಕ್ರವರ್ತಿ ರಿಯಲ್ ಎಸ್ಟೇಟ್ ಆಫೀಸ್
90190 73374

**ಮೊರಾರ್ಜಿ ಶಾಲೆಗಳಿಗೆ ತರಬೇತಿ**
ಮೊರಾರ್ಜಿ ಶಾಲೆಗಳಿಗೆ ಇದೇ ಶುಕ್ರವಾರ (24.01.2025) ರಿಂದ ಪ್ರತಿ ದಿನ ಸಂಜೆ 6 ರಿಂದ 9 ರವರೆಗೆ ತರಬೇತಿ ಇರುತ್ತದೆ. ಇದಲ್ಲದೆ ನಮ್ಮಲ್ಲಿ ಇದ್ದು ಈ ಮೇಲಿನ ಶಾಲೆಗಳಿಗೆ ಓದಲು ಹಾಸ್ಟೆಲ್‌ನ ವ್ಯವಸ್ಥೆ ಸಹ ಇರುತ್ತದೆ. ತರಬೇತಿ ನೀಡುವವರು ಶ್ರೀ ಸುರೇಶ್ ಪಿ. ಮುರುಗಿ. (M.sc, B.Ed)
99028 24909, 98447 48763

**ಮನೆಗಳು ಬಾಡಿಗೆಗೆ ದೊರೆಯುತ್ತವೆ. ವಿಚಾರಿಸಿ**
ಆಂಜನೇಯ ಬಡಾವಣೆಯಲ್ಲಿ ಎಸ್. ಎಸ್. 'ಬಿ' ಬ್ಲಾಕ್‌ನಲ್ಲಿ ಕುವೆಂಪು ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಡುಪ್ಲೆಕ್ಸ್ ಮನೆ,
ದಕ್ಷಿತ್ ಐನಳ್ಳಿ ಏಜೆಂಟ್
96061 26471

**ಹೋಟೆಲ್ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
ಫುಲ್ ಟೈಂ & ಪಾರ್ಟ್ ಟೈಂ
ಸಂಪರ್ಕಿಸಿ :
99646 36217

**ಕೆಲಸಗಾರರು ಬೇಕಾಗಿದ್ದಾರೆ**
ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ.
70190 51306

**ಜಾಗ ಬಾಡಿಗೆಗೆ**
ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡ 10 ಗುಂಟೆ ಖಾಲಿ ಜಾಗ ಬಾಡಿಗೆಗೆ ಇರುತ್ತದೆ. H. ಕಲ್ಪನಹಳ್ಳಿ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
99645 92727

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಡಿಪ್ರೆಶನ್, ಮೈಗ್ರೇನ್, ಕ್ಯಾನ್ಸರ್, ಕಿಡ್ನಿ ತೊಂದರೆ, ಅಸ್ತಮಾ, ಸೋರಿಯಾಸಿಸ್, ಡ್ರಗ್ಸ್ ಮುಂತಾದ ದುಶ್ಚಟಗಳು, ಗ್ರಹದೋಷ, ನಾಗದೋಷ, ಮಾಟ ಮಂತ್ರ, ಭೂತ ಪ್ರೇತಗಳ ಭಯ ಹಾಗೂ ಹಿಂದಿನ ಜನ್ಮಗಳ ದೋಷಗಳ ಸಂಪೂರ್ಣ ನಿವಾರಣೆಗಾಗಿ
(ವ್ಯಕ್ತಿ ಎಷ್ಟೇ ದೂರದಲ್ಲಿದ್ದರೂ ಡಿಸ್ಟೆನ್ಸ್ ಹೀಲಿಂಗ್ ಮಾಡುತ್ತೇವೆ)
80733 42011

**SITE FOR SALE**
J.H. Patel Badavane ('E' Block) 3rd Main, 1st Cross Site Number : 723
Size :30×40 Face: ಪೂರ್ವ
63625 16948, 97314 54916
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ.
ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

**ಅಡುಗೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ**
50 ಮಕ್ಕಳಿಗೆ ಅಡುಗೆ ಮಾಡಲು ಮತ್ತು ಪಾತ್ರೆ ತೊಳೆಯಲು ಇಬ್ಬರು ಅನುಭವಿ ಮಹಿಳೆಯರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 6.30 ರಿಂದ 2.30, ಸಂಜೆ 6 ರಿಂದ 8 ರವರೆಗೆ
99028 24909, 98447 48763

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ.
ಸಂಬಳ : 10000 ದಿಂದ 11000.
ESI, PF ಸೌಲಭ್ಯವಿರುತ್ತದೆ.
GN ಸೆಕ್ಯೂರಿಟಿ ಸರ್ವೀಸ್
89047 67479

**ಅತ್ಯುತ್ತಮ ನಾಟಿ ತಳಿಯ ಅಡಿಕೆ ಸಸಿಗಳು ಸಿಗುತ್ತವೆ**
ನಾಲ್ಕು ಗಾತ್ರದ ಪ್ಯಾಕೆಟ್‌ನಲ್ಲಿ ದೊರೆಯುತ್ತವೆ.
ಶಿವ ಹೈಟೆಕ್ ನರ್ಸರಿ, ತಾಳ್ಯ
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
ಮಲ್ಲಿಕಾರ್ಜುನ್ ವಿ.ಹೆಚ್.
81975 69730

**Reputed Footware Company showroom**
Requires Sales Executuve-1 Post.
Qual : SSLC/PUC
LIBERTY SHOES LTD.,
Opp. SS mall, Shamanur Road, Davangere.
+91 73530 31465

**ಬೇಕಾಗಿದ್ದಾರೆ**
ಡಿಲೆವರಿ ಬಾಯ್ಸ್ ಬೇಕಾಗಿದ್ದಾರೆ.
ಸ್ವವಿವರದೊಂದಿಗೆ ಸಂಪರ್ಕಿಸಿ
ಎ.ಕೆ. ಟ್ರೇಡರ್ಸ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬಾಡಿಗೆಗೆ**
ಹುಲ್ಲುಮನೆ ಹೈಟ್ಸ್ ಕೆನರಾ ಬ್ಯಾಂಕ್ ಹತ್ತಿರ ಸರಸ್ವತಿ ಬಡಾವಣೆ 1500Sqft ಹಾಲ್ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
81055 42689

**ಬೇಕಾಗಿದ್ದಾರೆ**
ನಮ್ಮ ಕಾಫೀ ಶಾಪ್‌ನಲ್ಲಿ ಮತ್ತು ಕಾಫೀ ಕೌಂಟರ್‌ಗಳಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಆಸಕ್ತಿವುಳ್ಳವರು ತಮ್ಮ ವಿವರಗಳೊಂದಿಗೆ ಸಂಪರ್ಕಿಸಿ :
ANS ಫುಡ್ಸ್
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎದುರು, ಮಂಡಿಪೇಟೆ, ದಾವಣಗೆರೆ-1.
86604 12149

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಹೋಟೆಲ್ ಮಳಿಗೆ ಬಾಡಿಗೆಗೆ ಇದೆ**
ಕೊಂಡಜ್ಜಿ ರಸ್ತೆ, ದೇವನಗರಿ ಗ್ಯಾಸ್ ಗೋಡೌನ್ ಎದುರು, ಅಶೋಕ ನಗರ, ದಾವಣಗೆರೆ.
98458 85671

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**Video Edit**
ಮಾಡುವವರು ಬೇಕಾಗಿದ್ದಾರೆ.
77600 70828

# ಜಗಳೂರು ತಲುಪಿದ ರೈತರ ಪ್ರತಿಭಟನಾ ಪಾದಯಾತ್ರೆ

ದಾವಣಗೆರೆ, ಜ. 19 - ಅರಣ್ಯ ಭೂಮಿ ಅತಿಕ್ರಮಣ ಸಾಗುವಳಿದಾರರನ್ನು ಒಕ್ಕಲೆಬಿಸುತ್ತಿರುವ ಅರಣ್ಯ ಇಲಾಖೆ ಅಧಿಕಾರಿಗಳ ಕ್ರಮ ಖಂಡಿಸಿ ಜಗಳೂರು ತಾಲ್ಲೂಕು ಗೌಡಗೊಂಡನಹಳ್ಳಿಯಿಂದ ರಾಜ್ಯ ರೈತ ಸಂಘ ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದಿಂದ ಹಮ್ಮಿಕೊಂಡಿರುವ ಪಾದಯಾತ್ರೆ ಭಾನುವಾರ ಜಗಳೂರು ತಲುಪಿತು.




ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಅರಣ್ಯ ಇಲಾಖೆ ಮತ್ತು ತಹಶೀಲ್ದಾರ್ ದೌರ್ಜನ್ಯ ವಿರೋಧಿಸಿ ಗಡಿಮಾಕುಂಟೆಯಿಂದ ಹೊರಟಿರುವ ಪಾದಯಾತ್ರೆ ಜಗಳೂರುಗೆ ತಲುಪಿದ್ದು, ಸೋಮವಾರ ಜಗಳೂರು ತಹಶೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದರು.

ಗೌಡಗೊಂಡನ ಹಳ್ಳಿಯ 23 ಕುಟುಂಬಗಳು ಅರಣ್ಯ ಹಕ್ಕು ಸಮಿತಿಗೆ ಅರ್ಜಿ ಸಲ್ಲಿಸಿದರೂ ಕೂಡ ಇದುವರೆಗೂ ಕಸವನಹಳ್ಳಿಯ ಪಿಡಿಓ ಯಾವುದೇ ಕ್ರಮ ಕೈಗೊಳ್ಳದೇ ಅರ್ಜಿಗಳನ್ನು ಹಾಗೆಯೆ ಇಟ್ಟುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕು ಎಂದು ಆಗ್ರಹಿಸಿದರು.

ಅರ್ಜಿ ಸಲ್ಲಿಕೆಯಾಗಿ ಆರೇಳು ತಿಂಗಳು ಕಳೆದಿದ್ದರೂ ಪಿಡಿಓ ಯಾವುದೇ ಕ್ರಮ ಕೈಗೊಂಡಿಲ್ಲ. ಇದು ಅರಣ್ಯ ಭೂಮಿ ಅತಿಕ್ರಮಣ ಸಾಗುವಳಿದಾರರು ಮತ್ತು ಅರಣ್ಯ ಇಲಾಖೆಯ ವಿರುದ್ಧ ಸಂಘರ್ಷಕ್ಕೆ ಕಾರಣವಾಗಿದೆ ಎಂದ ಅವರು, ಜಗಳೂರು ತಾಲ್ಲೂಕಿನಲ್ಲಿ ತಿರಸ್ಕರಿಸಿರುವ ಫಾರಂ ನಂ. 53 ಮತ್ತು 57 ಅರ್ಜಿಗಳನ್ನು ಮರುಪರಿಶೀಲನೆ ಮಾಡಬೇಕು. ಒಂದು ವೇಳೆ ಫಾರಂ 57 ಅರ್ಜಿ ವಜಾ ಮಾಡಿ ಭೂಮಿ ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿದರೆ ಒಂದು ಇಂಚು ಭೂಮಿ ಕೂಡ ನೀಡುವುದಿಲ್ಲ. ಇದನ್ನು ಖಂಡಿಸಿ ತಾಲ್ಲೂಕಿನಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈಗಾಗಲೇ ಹೊನ್ನಾಳಿ ತಾಲ್ಲೂಕಿನಲ್ಲಿ ಪಿಎಂ ಕುಸುಮ್ ಯೋಜನೆಯಡಿ ರೈತರ ಭೂಮಿ ಕಸಿದು ಉದ್ಯಮಿಗೆ ನೀಡಲಾಗಿದೆ. ಇದರಿಂದ ನೊಂದ ರೈತ ವಿಷ ಕುಡಿದು ಮೆಗ್ಗಾನ್ ಆಸ್ಪತ್ರೆಗೆ ದಾಖಲಾಗಿದ್ದು, ಭವಿಷ್ಯದಲ್ಲಿ ಅರಣ್ಯ ಇಲಾಖೆ ಈ ರೀತಿಯ ಘಟನೆಗಳಿಗೆ ಅವಕಾಶ ಮಾಡಿಕೊಡದೇ, ಅರ್ಜಿ ಸಲ್ಲಿಸಿರುವ ಎಲ್ಲ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕೆಂದು ಆಗ್ರಹಿಸಿದರು.

ಪಾದಯಾತ್ರೆಯಲ್ಲಿ ಗೌಡಗೊಂಡನಹಳ್ಳಿ ಮತ್ತು ಚಿಕ್ಕಉಜ್ಜಿನಿ ಗ್ರಾಮದ ಹತ್ತಾರು ರೈತ ಕುಟುಂಬಗಳು ಭಾಗವಹಿಸಿದ್ದವು. ಮೆರವಣಿಗೆಯಲ್ಲಿ ಚಿಕ್ಕಮಲ್ಲನಹೊಳೆ ಚಿರಂಜೀವಿ, ಬೈರನಾಯಕನಹಳ್ಳಿ ರಾಜು, ಕಸವನಹಳ್ಳಿ ನಾಗರಾಜ್, ಸತೀಶ್, ಹನುಮಂತಾಪುರದ ರಂಗನಾಥ್ ಇತರರು ಭಾಗವಹಿಸಿದ್ದರು. ನಾಳೆ ಜಗಳೂರಿನಿಂದ ಹೊರಡಲಿರುವ ಪಾದಯಾತ್ರೆ ದಾವಣಗೆರೆ ಜಿಲ್ಲಾಧಿಕಾರಿ ಕಚೇರಿ ಕಡೆಗೆ ಸಂಚರಿಸಲಿದೆ.

# ಸ್ಥಳೀಯ ಉತ್ಪಾದನೆಗೆ ಉತ್ತೇಜನ ನೀಡಲು ಸುಂಕ ಹಾಗೂ ನಿಯಂತ್ರಣದಲ್ಲಿ ಬದಲಾವಣೆ

ನವದೆಹಲಿ, ಜ. 19- ಗೃಹೋಪಯೋಗಿ ಉಪಕರಣಗಳ ಸ್ಥಳೀಯ ಉತ್ಪಾದನೆಗೆ ಉತ್ತೇಜನ ನೀಡುವ ಸಲುವಾಗಿ ಕೇಂದ್ರ ಸರ್ಕಾರ ಸುಂಕ ಹಾಗೂ ನಿಯಂತ್ರಣಗಳಲ್ಲಿ ಬದಲಾವಣೆ ತರುವ ಸಾಧ್ಯತೆ ಇದೆ.

ಮೊಬೈಲ್‌ಗಳನ್ನು ದೇಶಿಯವಾಗಿ ಉತ್ಪಾದಿಸಲು ತೆಗೆದುಕೊಂಡ ಕ್ರಮಗಳ ಮಾದರಿಯಲ್ಲೇ ಗೃಹ ಉಪಯೋಗಿ ಉತ್ಪನ್ನಗಳ ವಿಷಯದಲ್ಲೂ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇದೆ. ವ್ಯಾಪಾರ ನಡೆಸುವುದನ್ನು ಸುಲಲಿತಗೊಳಿಸುವ ಹಾಗೂ ರಫ್ತನ್ನು ಸ್ಪರ್ಧಾತ್ಮಕವಾಗಿ ಮಾಡುವ ದಿಸೆಯಲ್ಲಿಯೂ ಮುಂಬರುವ ಬಜೆಟ್‌ನಲ್ಲಿ ಕ್ರಮಗಳನ್ನು ತೆಗೆದುಕೊಳ್ಳುವ ಸಾಧ್ಯತೆ ಇದೆ.

ಮುಂಬರುವ ಕೇಂದ್ರ ಬಜೆಟ್‌ನಲ್ಲಿ ಸುಂಕ ದರಗಳನ್ನು ಸರಳಗೊಳಿಸಲಾಗುವುದು ಹಾಗೂ ಗ್ರಾಹಕರ ವಸ್ತುಗಳ ದೇಶಿಯ ಉತ್ಪಾದನೆಗೆ ಉತ್ತೇಜನ ನೀಡಲಾಗುವುದು ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಮೂಲಗಳು ತಿಳಿಸಿವೆ.

ಈ ಹಿಂದೆ ಕೇಂದ್ರ ಸರ್ಕಾರ ಸ್ಥಳೀಯವಾಗಿ ಮೊಬೈಲ್ ಫೋನ್‌ಗಳನ್ನು ಉತ್ಪಾದಿಸಲು ಉತ್ತೇಜನ ನೀಡಿತ್ತು. ಇದಕ್ಕಾಗಿ ಆಮದು ಫೋನ್‌ಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸಲಾಗಿತ್ತು ಹಾಗೂ ಸ್ಥಳೀಯ ಉತ್ಪಾದಕರಿಗೆ ಉತ್ತೇಜನ ನೀಡಲಾಗಿತ್ತು. ಇದೆ ಮಾದರಿಯಲ್ಲಿ ಎ.ಸಿ. ವಾಷಿಂಗ್ ಮಷಿನ್ ಹಾಗೂ ಟೆಲಿಕಾಂ ಉಪಕರಣಗಳನ್ನು ದೇಶಿಯವಾಗಿ ಉತ್ಪಾದಿಸಲು ಉತ್ತೇಜನ ನೀಡಲಾಗುವುದು.

ದೇಶಿಯ ಉತ್ಪಾದನೆಗೆ ಉತ್ತೇಜನ ನೀಡುವಲ್ಲಿ ಸುಂಕ ಪರಿಣಾಮಕಾರಿಯಾಗಿ ಕಂಡು ಬಂದಿದೆ. ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ದೇಶಿಯ ಉದ್ಯಮಗಳನ್ನು ರಕ್ಷಿಸಲು ಹಾಗೂ ಜಾಗತಿಕ ಸ್ಪರ್ಧಾತ್ಮಕತೆ ಕಾಯ್ದುಕೊಳ್ಳಲು ಯೋಜಿತ ಕ್ರಮ ತೆಗೆದುಕೊಳ್ಳಬೇಕಿದೆ ಎಂದು ನೆಕ್ಸ್‌ಡಿಗಮ್ ಸಂಸ್ಥೆಯ ಸಂಜಯ್ ಚಾಪ್ರಿಯ ಹೇಳಿದ್ದಾರೆ.

## ಮೈಸೂರು:ಪರೀಕ್ಷಾ ಕಾರ್ಯಾಗಾರ

ದಾವಣಗೆರೆ, ಜ. 19- ಜಿಲ್ಲಾ ಪಂಚಾಯತಿ, ಶಾಲಾ ಶಿಕ್ಷಣ ಇಲಾಖೆ, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಇದೇ ದಿನಾಂಕ 23 ರಂದು ಬೆಳಿಗ್ಗೆ 10.35 ಕ್ಕೆ ಮೈಸೂರಿನ ಊಟಗಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ 2024-25 ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವಭಾವಿ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

# ಇ.ವಿ ವಲಯಕ್ಕೆ ಹೆಚ್ಚು ಕಂಪನಿಗಳ ಪ್ರವೇಶದಿಂದ ಅಡ್ಡಿಗಳ ನಿವಾರಣೆ

ನವದೆಹಲಿ, ಜ. 19- ಎಲೆಕ್ಟ್ರಿಕ್ ವಾಹನಗಳ (ಇ.ವಿ.) ವಲಯಕ್ಕೆ ಹೆಚ್ಚು ಕಂಪನಿಗಳು ಪ್ರವೇಶ ಮಾಡುವು ದರಿಂದ ಅಡ್ಡಿಗಳು ನಿವಾರಣೆಯಾಗುತ್ತವೆ ಹಾಗೂ ಎಲೆಕ್ಟ್ರಿಕ್ ವಾಹನಗಳ ಬಳಕೆ ಭಾರತದಲ್ಲಿ ಹೆಚ್ಚಾಗಲಿದೆ ಎಂದು ಪ್ರಮುಖ ಉತ್ಪಾದಕರು ಹೇಳಿದ್ದಾರೆ.

ಎಲೆಕ್ಟ್ರಿಕ್ ವಾಹನ ವಲಯದಲ್ಲಿ ಹೆಚ್ಚು ಉತ್ಪನ್ನಗಳು ಇದ್ದಲ್ಲಿ ಗ್ರಾಹಕರ ವೈವಿಧ್ಯಮಯ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗುತ್ತದೆ. ಸ್ಪರ್ಧೆಯಿಂದಾಗಿ ಮಾರುಕಟ್ಟೆ ಬೆಳೆಯುತ್ತದೆ ಎಂದು ಉದ್ಯಮ ವಲಯದ ಪ್ರಮುಖರು ಹೇಳಿದ್ದಾರೆ. ಮಾರುತಿ ಸುಜುಕಿ ವಿತಾರ ಹಾಗೂ ಹುಂಡೈ ಮೋಟಾರ್ ಕಂಪನಿಯು ಕ್ರೆಟಾ ಎಲೆಕ್ಟ್ರಿಕ್ ವಾಹನಗಳನ್ನು ಬಿಡುಗಡೆ ಮಾಡಿದೆ. ಇದು ಎಲೆಕ್ಟ್ರಿಕ್ ವಾಹನಗಳ ಬಗ್ಗೆ ಭಾರತದಲ್ಲಿ ಇರುವ ನಕಾರಾತ್ಮಕ ಯೋಚನೆ ಬದಲಿಸಲು ನೆರವಾಗಲಿದೆ ಎಂದು ಉದ್ಯಮ ವಲಯದಲ್ಲಿ ಹೇಳಲಾಗುತ್ತಿದೆ.

ಎಲೆಕ್ಟ್ರಿಕ್ ವಾಹನ ವಲಯದ ಕಂಪನಿಗಳು ಒಮ್ಮತ ಹೊಂದುವುದರಿಂದ ಈ ವಲಯ ವೇಗವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂದವರು ಹೇಳಿದ್ದಾರೆ.

ಈ ಹಿಂದೆ ಎಲೆಕ್ಟ್ರಿಕ್ ವಾಹನ ವಲಯದ ಬಗ್ಗೆ ಹಲವಾರು ನಕಾರಾತ್ಮಕ ಚಿಂತನೆಗಳು ಇದ್ದವು. ಈಗ ಮೂಲ ಉಪಕರಣ ಉತ್ಪಾದಕರೆಲ್ಲರೂ ನಂಬಿಕಾರ್ಹ ಎಲೆಕ್ಟ್ರಿಕ್ ವಾಹನ ಉತ್ಪಾದನಾ ಸಾಮರ್ಥ್ಯ ಹೊಂದಿದ್ದಾರೆ. ಇದರಿಂದಾಗಿ ಎಲೆಕ್ಟ್ರಿಕ್ ವಾಹನಗಳ ಬಗ್ಗೆ ಇರುವ ಧೋರಣೆ ಬದಲಾಗಲಿದೆ ಎಂದು ಮರ್ಸಿಡಿಸ್ ಬೆಂಜ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಓ ಸಂತೋಷ್ ಅಯ್ಯರ್ ಹೇಳಿದ್ದಾರೆ.

ಕಳೆದ ವರ್ಷದವರೆಗೂ ಇದ್ದ ಗೊಂದಲ ಈಗ ಸ್ವಲ್ಪ ಕಡಿಮೆಯಾಗಲಿದೆ. ಭಾರತೀಯ ಆಟೋಮೊಬೈಲ್ ವಲಯದಲ್ಲಿ ಒಂದೇ ಧ್ವನಿ ಮೂಡುವುದರಿಂದ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

ಇದೇ ರೀತಿಯ ನಿಲುವು ವ್ಯಕ್ತಪಡಿಸಿರುವ ಟಾಟಾ ಮೋಟಾರ್ಸ್ ಪ್ರಯಾಣಿಕರ ವಾಹನ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ, ಎಲ್ಲಾ ಉತ್ಪಾದಕರು ಈ ವಲಯಕ್ಕೆ ಬಂದಾಗ ಗ್ರಾಹಕರಲ್ಲಿ ವಿಶ್ವಾಸ ಮೂಡುತ್ತದೆ. ಈ ವಿಶ್ವಾಸದಿಂದ ಮಾರುಕಟ್ಟೆ ಬೆಳೆಯಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ.

ಈ ವಲಯದಲ್ಲಿ ಸ್ಪರ್ಧೆ ಹೆಚ್ಚಾದಷ್ಟು ಒಳ್ಳೆಯದು. ಇದರಿಂದ ಮಾರುಕಟ್ಟೆ ವಿಸ್ತಾರವಾಗುತ್ತದೆ ಎಂದು ಚಂದ್ರ ತಿಳಿಸಿದ್ದಾರೆ.

ಕಳೆದ ಒಂದು ವರ್ಷದಲ್ಲಿ ಎಲೆಕ್ಟ್ರಿಕ್ ವಾಹನ ವಲಯದಲ್ಲಿ ಒತ್ತಡ ಉಂಟಾಗಿತ್ತು. ಜಾಗತಿಕವಾಗಿ ಎಲೆಕ್ಟ್ರಿಕ್ ವಾಹನಗಳ ಬಗ್ಗೆ ನಕಾರಾತ್ಮಕ ಮಾತುಗಳು ಕೇಳಿ ಬರುತ್ತಿದ್ದವು. ಹೀಗಾಗಿ ಎಲೆಕ್ಟ್ರಿಕ್ ವಾಹನ ಖರೀದಿಗೆ ಸೂಕ್ತ ಸಮಯ ಯಾವುದು ಎಂಬ ಬಗ್ಗೆ ಗ್ರಾಹಕರಲ್ಲಿ ಗೊಂದಲ ಇತ್ತು ಎಂದವರು ಹೇಳಿದ್ದಾರೆ.

ಈಗ ಹೊಸ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದರಿಂದ ಜನರೂ ಸಹ ಎಲೆಕ್ಟ್ರಿಕ್ ವಾಹನಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ. ಇದು ಗ್ರಾಹಕ ರಲ್ಲಿ ಅರಿವು ಹೆಚ್ಚಿಸಲು ಮತ್ತು ಮಾರುಕಟ್ಟೆ ವಿಸ್ತರಿಸಲು ನೆರವಾಗಲಿದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

ಈ ಬಗ್ಗೆ ಮಾತನಾಡಿರುವ ಬಿವೈಡಿ ಇಂಡಿಯಾ ಎಲೆಕ್ಟ್ರಿಕ್ ಪ್ಯಾಸೆಂಜರ್ ವೆಹಿಕಲ್ಸ್ ಬಿಜಿನೆಸ್ ಮುಖ್ಯಸ್ಥ ರಾಜೀವ್ ಚೌಹಾಣ್, ದೇಶದ ಅತಿ ದೊಡ್ಡ ಕಾರು ಉತ್ಪಾದನಾ ಕಂಪನಿಯಾಗಿರುವ ಮಾರುತಿ ಈಗ ಎಲೆಕ್ಟ್ರಿಕ್ ವಾಹನ ವಲಯಕ್ಕೆ ಕಾಲಿಟ್ಟಿದೆ. ಮೂರನೇ ಸ್ಥಾನದಲ್ಲಿರುವ ಟಾಟಾ ಮೋಟರ್ಸ್ ಎಲೆಕ್ಟ್ರಿಕ್ ವಾಹನ ವಲಯದಲ್ಲಿ ವಿಸ್ತರಣೆ ಕಾಣುತ್ತಿದೆ. ಹೀಗಾಗಿ ಈ ವಲಯ ತ್ವರಿತವಾಗಿ ಬೆಳೆಯಲಿದೆ ಎಂದಿದ್ದಾರೆ.

ಎಲೆಕ್ಟ್ರಿಕ್ ವಾಹನಗಳ ಮಾರುಕಟ್ಟೆ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿರುವ ಮಹೀಂದ್ರ ಅಂಡ್ ಮಹೀಂದ್ರ ಕಂಪನಿಯ ಸಿಇಓ (ಆಟೋ ಅಂಡ್ ಫಾರಂ ಸೆಕ್ಟರ್) ರಾಜೇಶ್ ಜೆಜುರಿಕರ್, ಎಲೆಕ್ಟ್ರಿಕ್ ವಾಹನ ವಲಯಕ್ಕೆ ಹೆಚ್ಚು ಜನ ಬಂದಷ್ಟು ಈ ವಲಯ ವೇಗವಾಗಿ ಬೆಳೆ ಯುತ್ತದೆ. ಇದರಿಂದ ಉತ್ಪನ್ನಗಳಿಗೆ ಇರುವ ಅಡ್ಡಿಗಳು ನಿವಾರಣೆಯಾಗುತ್ತವೆ. ಗ್ರಾಹಕರು ಎಲೆಕ್ಟ್ರಿಕ್ ವಾಹನ ಖರೀದಿಸಲು ಹೆಚ್ಚು ಆಸಕ್ತಿ ತೋರುತ್ತಾರೆ ಎಂದಿದ್ದಾರೆ.

ಎಲೆಕ್ಟ್ರಿಕ್ ವಾಹನ ವಲಯದಲ್ಲಿ ಹೆಚ್ಚು ಕಂಪನಿಗಳು ಪ್ರವೇಶ ಮಾಡುತ್ತಿರುವುದರಿಂದ ಮುಂದಿನ ಎರಡರಿಂದ ಮೂರು ವರ್ಷಗಳಲ್ಲಿ ಈ ವಲಯದಲ್ಲಿ ಬೇಡಿಕೆ ಇನ್ನಷ್ಟು ಹೆಚ್ಚಾಗಲಿದೆ. ಆದರೆ ಈ ವಲಯದಲ್ಲಿ ಬೇಡಿಕೆ ತ್ವರಿತವಾಗಿ ಹೆಚ್ಚಾಗದೆ ಇದ್ದರೆ ನಾವೆಲ್ಲರೂ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದವರು ಹೇಳಿದ್ದಾರೆ.

# ನೀತಿಯುತ ಬೋಧನೆ ಇಲ್ಲದೇ ಕುಸಿಯುತ್ತಿರುವ ಶಿಕ್ಷಣ ಮೌಲ್ಯ

ಹೊನ್ನಾಳಿ, ಜ.19- ನೀತಿಯುತ ಬೋಧನೆ ಇಲ್ಲದೇ ಇಂದು ಶಿಕ್ಷಣದ ಮೌಲ್ಯಗಳು ಕುಸಿಯುತ್ತಿವೆ ಎಂದು ಚನ್ನಗಿರಿ ತಾಲ್ಲೂಕಿನ ಪಾಂಡೋಮಟ್ಟಿ-ಕಮ್ಮತ್ತಹಳ್ಳಿ ವಿರಕ್ತ ಮಠದ ಶ್ರೀ ಗುರುಬಸವ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.



ಪಟ್ಟಣದ ಹೊರವಲಯದಲ್ಲಿರುವ ಶ್ರೀ ಸಾಯಿ ಗುರುಕುಲ ರೆಸಿಡೆನ್ಷಿಯಲ್ ಸ್ಕೂಲ್‌ನಲ್ಲಿ ಹಮ್ಮಿಕೊಂಡಿದ್ದ 16ನೇ ವಾರ್ಷಿಕೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶಿಕ್ಷಣಕ್ಕೆ ಯಾವಾಗಲೂ ಮನ್ನಣೆ, ಗೌರವ ಇದೆ, ರಾಜನಾದವನಿಗೆ ಅವನ ವ್ಯಾಪ್ತಿಯಲ್ಲಿ ಗೌರವಾದರಗಳು ಲಭಿಸಿದರೆ ಶಿಕ್ಷಣ ತಜ್ಞನಿಗೆ ವಿಶ್ವವ್ಯಾಪಿ ಗೌರವ ಸಿಗುತ್ತದೆ ಹಾಗಾಗಿ ಶಿಕ್ಷಣಕ್ಕೆ ತನ್ನದೇ ಆದ ಅದ್ಭುತ ಶಕ್ತಿ ಇದೆ ಎಂದು ಹೇಳಿದರು.

ಇಂದಿನ ಎಸ್ಸೆಸ್ಸೆಲ್ಸಿ ಮುಗಿಸಿದ ಮಕ್ಕಳಿಗೆ ಕ್ರಮ ಬದ್ಧವಾಗಿ ಹಾಗೂ ವ್ಯಾಕರಣ ಬದ್ಧವಾಗಿ ಬರೆಯುವುದಕ್ಕೆ ಬರುತ್ತಿಲ್ಲ. ಇದರಿಂದ ಶುದ್ಧ ಬರಹವೇ ಮಾಯವಾಗಿದೆ. ಇದರ ಬಗ್ಗೆ ತುಲನಾತ್ಮಕ ಚಿಂತನೆಯ ಅಗತ್ಯ ಇದೆ ತಿಳಿಸಿದರು.

ಪೋಷಕರು ತಮ್ಮ ಮಕ್ಕಳಿಗೆ ಎಲ್‌ಕೆಜಿಯಿಂದ ಪಿಯುಸಿವರೆಗೆ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಕೊಡಿಸಿ ನಂತರ ಮೆಡಿಕಲ್, ಇಂಜಿನಿಯರಿಂಗ್ ಶಿಕ್ಷಣ ಸೇರಿದಂತೆ ಇತರೆ ಉನ್ನತ ಶಿಕ್ಷಣಕ್ಕೆ ಸರ್ಕಾರಿ ಕಾಲೇಜುಗಳ ಮೊರೆ ಹೋಗುತ್ತಿದ್ದಾರೆ. ಈ ಧೋರಣೆ ಬದಲಾಗಬೇಕು ಎಂದರು.

**ಪಾಂಡೋಮಟ್ಟಿ-ಕಮ್ಮತ್ತಹಳ್ಳಿ ವಿರಕ್ತ ಮಠದ ಶ್ರೀ ಗುರುಬಸವ ಸ್ವಾಮೀಜಿ ವಿಷಾದ**

ಪ್ರಸ್ತುತ ದಿನಗಳಲ್ಲಿ ನೈತಿಕ ಶಿಕ್ಷಣದ ಅವಶ್ಯಕತೆಯಿದ್ದು, ವಿಜ್ಞಾನಿಗಳಾಗುವುದು ಸುಲಭವಾಗಿದ್ದು, ಸುಜ್ಞಾನಿಗಳಾಗು ವುದು ಕಷ್ಟಕರವಾಗಿದೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗುರುಕುಲ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರೂ ಆದ ಶಾಸಕ ಡಿ.ಜಿ. ಶಾಂತನಗೌಡ ಮಾತನಾಡಿ, ಸಂಸ್ಕೃತಿ, ಸಂಸ್ಕಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಶಿಕ್ಷಣದ ಅವಶ್ಯಕತೆ ಇದೆ. ಒಂದನೇ ತರಗತಿಯಿಂದ ಎಸ್ಸೆಸ್ಸೆಲ್ಸಿವರೆಗೆ ವಿದ್ಯಾರ್ಥಿಗಳು ಶಿಸ್ತಿನಿಂದಿದ್ದು, ನಂತರ ಅಶಿಸ್ತು ತೋರುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯವಾಗಿದೆ, ವಿದ್ಯಾರ್ಥಿಗಳ ಈ ವರ್ತನೆಯಲ್ಲಿ ಉತ್ತಮ ಬದಲಾವಣೆಯಾಗಬೇಕಿದೆ ಎಂದು ಹೇಳಿದರು.

ಕಾರ್ಯದರ್ಶಿ ಪಿ.ಸೌಮ್ಯ ಪ್ರದೀಪ್‌ಗೌಡ, ಸಂಸ್ಥೆ ಉಪಾಧ್ಯಕ್ಷ ಶಂಕರಪ್ಪಗೌಡ, ಖಜಾಂಚಿ ಡಿ.ಜಿ. ಸೋಮಪ್ಪ, ಆಡಳಿತಾಧಿಕಾರಿ ಡಿ.ಎಸ್. ಅರುಣ್‌ಕುಮಾರ್, ನಿರ್ದೇಶಕಿ ಗೌರಮ್ಮ, ಶಾಲಾಭಿವೃದ್ಧಿ ಸಮಿತಿಯ ಡಿ.ಎಸ್.ಪ್ರದೀಪ್ ಗೌಡ, ಪ್ರಾಂಶುಪಾಲ ಸಿ.ಜಿ.ಸುರೇಂದ್ರ, ಶಿಕ್ಷಣ ಸಂಯೋಜಕ ಎ.ಜಿ.ಹರೀಶ್‌ಕುಮಾರ್, ಶಿಕ್ಷಕರಾದ ಮಧುಕುಮಾರ್, ತಿಪ್ಪೇಸ್ವಾಮಿ, ಹರೀಶ್‌ರಾಜ್ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಖೋ-ಖೋ ಕ್ರೀಡೆಯಲ್ಲಿ ರಾಷ್ಟ್ರವನ್ನು ಪ್ರತಿನಿಧಿಸಿದ ವಿದ್ಯಾರ್ಥಿನಿಯರನ್ನು, ಜೆಇಇ, ನೀಟ್ ವಿಭಾಗದಲ್ಲಿ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆಯಾದ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

# ಬಿಸಿಯೂಟ ತಯಾರಕರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಎಐಟಿಯುಸಿ ಪ್ರತಿಭಟನೆ

ಹರಪನಹಳ್ಳಿ, ಜ.19- ಸರ್ಕಾರಿ ಮತ್ತು ಅನುದಾನಿತ ಶಾಲೆಯಲ್ಲಿ ಅಡುಗೆ ಕೆಲಸ ಮಾಡುವ ಬಿಸಿ ಊಟ ತಯಾರಕರಿಗೆ 2025-26ನೇ ಸಾಲಿನ ಬಜೆಟ್‌ನಲ್ಲಿ ವೇತನ ಹೆಚ್ಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ತಾಲ್ಲೂಕು ಅಕ್ಷರ ದಾಸೋಹ ಬಿಸಿಯೂಟ ತಯಾರಕ ಫೆಡರೇಷನ್ಸ್ (ಎಐಟಿಯುಸಿ) ವತಿಯಿಂದ ಪ್ರತಿಭಟನೆ ನಡೆಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.




ಈ ವೇಳೆ ಸಂಘಟನೆಯ ರಾಜ್ಯ ಮಂಡಳಿ ಸದಸ್ಯ ಗುಡಿಹಳ್ಳಿ ಹಾಲೇಶ್ ಮಾತನಾಡಿ, 23 ವರ್ಷಗಳಿಂದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಅಡುಗೆ ಕೆಲಸ ಮಾಡುವ ಬಿಸಿ ಊಟ ತಯಾರಕರಿಗೆ ಕೇವಲ 3600 ರೂ. ಮಾತ್ರ ವೇತನ ನಿಡುತ್ತಿದ್ದು, ಪ್ರಸಕ್ತ ದಿನಗಳಲ್ಲಿ ಈ ವೇತನ ಜೀವನ ನಿರ್ವಹಣೆಗೆ ಕಷ್ಟಕರ ಎಂದು ಮನವರಿಕೆ ಮಾಡಿದರು.

ವಿಧಾನ ಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದರೆ 6ನೇ ಗ್ಯಾರಂಟಿಯಾಗಿ ವೇತನ ಹೆಚ್ಚಿಸುವುದಾಗಿ ನೀಡಿದ ಭರವಸೆ ಮರೆಯಬಾರದು. ಕೂಡಲೇ ಇಡುಗಂಟು, ಮರಣ ಪರಿಹಾರ, ಆಸ್ಪತ್ರೆ ಚಿಕಿತ್ಸಾ ವೆಚ್ಚ ಹಾಗೂ ಮೊದಲಿದ್ದ ಬ್ಯಾಂಕ್ ಜಂಟಿ ಖಾತೆಯನ್ನು ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕು ಅಧ್ಯಕ್ಷೆ ಎ.ಪಿ ಪುಷ್ಪ ಮಾತನಾಡಿ, 1972ರ ಕಾರ್ಮಿಕ ಕಾಯ್ದೆಯಂತೆ ನಿವೃತ್ತಿ ಹೊಂದುವ ಎಲ್ಲಾ ಬಿಸಿಯೂಟ ತಯಾರಕರಿಗೆ ಉಪಧನ ಗ್ರಾಚ್ಯುಟಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಮೊದಲು ಶಾಲೆಗಳಲ್ಲಿ ವಾರಕ್ಕೆ ಎರಡು ದಿನ ಮೊಟ್ಟೆ ಕೊಡುವುದಿತ್ತು, ಆದರೆ ಈಗ ವಾರಕ್ಕೆ ಆರು ದಿನ ಮೊಟ್ಟೆ ಕೊಡುವುದರಿಂದ ಮೊಟ್ಟೆ ಸುಲಿಯುವ ಭತ್ಯೆಯನ್ನು ಪ್ರತಿ ಮೊಟ್ಟೆಗೆ 60 ಪೈಸೆಗೆ ಹೆಚ್ಚಿಸಬೇಕು. ಈ ಹಣವನ್ನು ಅಡುಗೆಯವರ ಖಾತೆಗೆ ಜಮಾ ಮಾಡಬೇಕು ಎಂದರು.

ವೇತನವನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಪಾವತಿಸಬೇಕು. ಬಿಸಿಯೂಟ ತಯಾರಕರಿಗೆ ನೀಡುವ ಕಿರುಕುಳ ತಪ್ಪಿಸಬೇಕು. ಕೂಡಲೇ ಬರಗಾಲ ಕಾರ್ಯಕ್ರಮದ ವೇತನವನ್ನು ಪಾವತಿಸಬೇಕೆಂದು ಮನವಿ ಮಾಡಿದರು.

ಈ ವೇಳೆ ಹೆಚ್.ಎಂ ಸಂತೋಷ್, ಬಳಿಗಾನೂರು ಕೊಟ್ರೇಶ್, ರಮೇಶ್ ನಾಯ್ಕ, ಗಂಗಮ್ಮ, ಹರಿಯಮ್ಮನಹಳ್ಳಿ ಬಸವರಾಜ್, ಹಗರಿ ಗುಡಿಹಳ್ಳಿ ಶಿವರಾಮ್, ದ್ವಾರಕೀಶ್, ತುಂಬಿಗೇರಿ ಅಕ್ಕಮ್ಮ, ಹೊಂಬಳಗಟ್ಟಿ ಸಾವಿತ್ರಮ್ಮ, ಮೈದೂರು ಮಂಜುಳಾ, ರುದ್ರಮ್ಮ, ತೆಲಿಗಿ ವಿಶಾಲಮ್ಮ, ಮಂಜುಳಾ, ಅಕ್ಕಮ್ಮ ಇತರರು ಇದ್ದರು.

## ಓದುಗರ ಪತ್ರ

### 'ಸಾಹಿತ್ಯ ಸಮ್ಮೇಳನಕ್ಕೆ ಕಳಪೆ ಹಾಸ್ಯದ ಕಪ್ಪು ಚುಕ್ಕೆ'

ಮಾನ್ಯರೇ,

ಈಚೆಗೆ ಜಗಳೂರಿನಲ್ಲಿ ನೆರವೇರಿದ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿದ್ಯುನ್ಮಾನ ಮಾಧ್ಯಮದ ಮೂಲಕ ನೋಡಿದೆ, ಕೇಳಿದೆ, ಚೆನ್ನಾಗಿ ನೆರವೇರಿತು. ಆದರೆ, ಇದಕ್ಕೆಲ್ಲಾ ಕಪ್ಪು ಚುಕ್ಕೆಯಂತೆ ಇತ್ತು ಸಂಜೆ ನೆರವೇರಿದ ಹಾಸ್ಯ ಕಾರ್ಯಕ್ರಮ.

ಅತ್ಯಂತ ಕಳಪೆ ಗುಣಮಟ್ಟದ ಹಾಸ್ಯ ಪ್ರಸ್ತುತಿ ಮಾಡಿದ ಮೂವರು ಒಂದಷ್ಟು ಸಮಯವನ್ನು ಅಲ್ಲಿನ ಶಾಸಕರನ್ನು ಮನಸೋ ಇಚ್ಛೆ ಹೊಗಳುವುದಕ್ಕೆ ಬಳಸಿಕೊಂಡರೆ ಉಳಿದ ಸಮಯವನ್ನೆಲ್ಲಾ ದ್ವಂದ್ವಾರ್ಥದ ಅಪ್ರಬುದ್ಧ ಅಸಂಬದ್ಧ ಹಾಸ್ಯಕ್ಕಾಗಿ, ಹಾಸ್ಯ ಎನ್ನುವುದಕ್ಕಿಂತ ಅಪಹಾಸ್ಯಕ್ಕಾಗಿ ಎನ್ನಬಹುದು ಬಳಸಿಕೊಂಡರು.

ಎಲ್ಲಿಯವರೆಗೆ ಎಂದರೆ ಯಾವುದೋ ಒಂದು ಚಲನಚಿತ್ರದ ಗೀತೆಯ ದಾಟಿಯನ್ನು ತೆಗೆದುಕೊಂಡು 'ನಮ್ಮಮ್ಮಗೂ ಎದುರು ಮನೆ ಆಂಟಿಗೂ ಒಂದೇ ಅನುಮಾನ, ನಮ್ಮಪ್ಪ ಯಾರಿಗೆ ಯಜಮಾನ??' ಎಂದೂ ಹೇಳಿಯೇ ಅರ್ಥಾತ್ ಹಾಡಿಯೇ ಬಿಟ್ಟರು!!. ಇದೂ ಒಂದು ಹಾಸ್ಯವೇ? ಅದೂ ಸಹಾ ಮಕ್ಕಳು, ದೊಡ್ಡವರು, ಹೆಂಗಸರು ಸೇರಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನ ಕಾರ್ಯಕ್ರಮದಂತಹ ವೇದಿಕೆಯಲ್ಲಿ!.

ಸಾಮಾನ್ಯವಾಗಿ ಸಾಹಿತ್ಯ ಸಮ್ಮೇಳನಗಳ ಗಂಭೀರವಾದ ವಿಚಾರಗೋಷ್ಠಿ, ಸ್ವಾರಸ್ಯವಾದ ಕವಿಗೋಷ್ಠಿ ಮುಂತಾದವುಕ್ಕೆ ಕೇಳುಗರು, ನೋಡುಗರು ಇರುವುದಿಲ್ಲ. ಆದರೆ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಾತ್ರ ಜನಸಾಗರವೇ ಸೇರುತ್ತದೆ. ಅಂತಹ ಸಂದರ್ಭದಲ್ಲಿ ಇಂತಹ ಕೀಳು ಮಟ್ಟದ ಹಾಸ್ಯ ಮುಂತಾದ ಕಾರ್ಯಕ್ರಮ ಕೊಟ್ಟರೆ ನೆರೆದವರು 'ಕನ್ನಡ ಸಾಹಿತ್ಯವೇ ಇಷ್ಟು' ಎಂದು ತೀರ್ಮಾನಕ್ಕೆ ಬರುವ ಅಪಾಯವೂ ಇರುತ್ತದೆ.

ಮುಂದಾದರೂ ಯಾವುದೇ ಸಾಹಿತ್ಯ ಸಮ್ಮೇಳನವಾಗಲೀ, ಕನ್ನಡ ಸಮ್ಮೇಳನವಾಗಲೀ, ಉತ್ಸವಗಳಾಗಲೀ, ಕಾರ್ಯಕ್ರಮವಾಗಲೀ ಹಾಸ್ಯ ಪ್ರಸ್ತುತಿಗಾರರನ್ನು ಕರೆಸುವ ಮೊದಲು ಗುಣಮಟ್ಟದ ಬಗ್ಗೆ ಆಲೋಚಿಸಲೇಬೇಕು. ಜನರಂಜನೆಯ ನೆಪದಲ್ಲಿ ಸಾಹಿತ್ಯ ಸಮ್ಮೇಳನಗಳ ಘನತೆಗೆ ಕುಂದು ಬರಬಾರದು.

- ಡಾ. ಎಚ್. ಬಿ. ಮಂಜುನಾಥ, ಹಿರಿಯ ಪತ್ರಕರ್ತರು

# ಹೂಡಿಕೆ ನಿಧಿಯೊಂದಿಗೆ ಸಂಬಂಧ: ಹಿಂಡನ್‌ಬರ್ಗ್‌ನ ಅಂಡರ್‌ಸನ್ ಮೇಲೆ ಕರಿ ನೆರಳು

ನವದೆಹಲಿ, ಜ.19- ಅದಾನಿ ಸಮೂಹದ ಕುರಿತ ವರದಿಯ ಮೂಲಕ ಸಮೂಹದ ಷೇರುಗಳ ತೀವ್ರ ಕುಸಿತಕ್ಕೆ ಕಾರಣವಾಗಿದ್ದ ಹಿಂಡನ್‌ಬರ್ಗ್ ರೀಸರ್ಚ್ ಸಂಸ್ಥೆಯ ಸ್ಥಾಪಕ ನೇಟ್ ಅಂಡರ್‌ಸನ್ ಈಗ ತಾವೇ ಆರೋಪದ ಕರಿ ನೆರಳಿಗೆ ಸಿಲುಕಿದ್ದಾರೆ. ಹೂಡಿಕೆ ನಿಧಿಯೊಂದಿಗೆ ಅವರು ಸಂಬಂಧ ಹೊಂದಿದ್ದರು ಎಂದು ಆರೋಪಿಸಲಾಗಿದೆ.

ಕೆನಡಾದ ಒಂಟಾರಿಯೊ ನ್ಯಾಯಾ ಲಯದ ಎದುರು ಅಲ್ಲಿನ ಪೋರ್ಟಲ್ ಒಂದು ಈ ಕುರಿತ ದಾಖಲೆಗಳನ್ನು ಸಲ್ಲಿಸಿದೆ. ಒಂಟಾರಿಯೊ ಸುಪೀರಿಯರ್ ಕೋರ್ಟ್ ಎದುರು ಮಾಹಿತಿ ದಾಖಲಿಸಲಾಗಿದೆ. ಇದರ ಪ್ರಕಾರ ಕೆನಡಾದ ಆನ್ಸನ್ ಹೂಡಿಕೆ ನಿಧಿ ಮುಖ್ಯಸ್ಥ ಮೊಯಿಜ್ ಕಸಮ್ ಅವರು ಅಂಡರ್‌ಸನ್ ಸೇರಿದಂತೆ ಹಲವಾರು ಜೊತೆ ಮಾಹಿತಿ ಹಂಚಿಕೊಂಡಿದ್ದರು. ವರದಿಯೊಂದನ್ನು ಸಿದ್ಧಪಡಿಸುವಾಗ ಆನ್ಸನ್ ಜೊತೆ ಅಂಡರ್‌ಸನ್ ಕೈ ಜೋಡಿಸಿದ್ದರು ಎಂದು ಮಾರ್ಕೆಟ್ ಫ್ರಾಡ್ಸ್ ಪೋರ್ಟಲ್ ವರದಿಯಲ್ಲಿ ತಿಳಿಸಲಾಗಿದೆ.

ಹಿಂಡನ್‌ಬರ್ಗ್ ಸಂಸ್ಥೆಯು ಅಲ್ಪಾವಧಿಯಲ್ಲಿ ಷೇರು ಮಾರಾಟ ಮಾಡುತ್ತಿತ್ತು. ಕೆಲ ಕಂಪನಿಗಳ ಕುರಿತು ನಕಾರಾತ್ಮಕ ವರದಿಗಳನ್ನು ಪ್ರಕಟಿಸಿ ಇದರಿಂದ ಷೇರುಗಳು ಕುಸಿತವಾದಾಗ ಸಂಸ್ಥೆಗೆ ಲಾಭವಾಗು ತ್ತಿತ್ತು. ಈಗ ಹೂಡಿಕೆ ಸಂಸ್ಥೆಯೊಂದರ ಜೊತೆ ಹಿಂಡನ್‌ಬರ್ಗ್ ಸಂಬಂಧ ಹೊಂದಿರುವುದು ಗಮನಾರ್ಹವಾಗಿದೆ. ಅಂಡರ್‌ಸನ್ ಹಾಗೂ ಆನ್ಸನ್ ನಿಧಿಗಳ ನಡುವೆ ಇ-ಮೇಲ್ ಸಂಭಾಷಣೆ ನಡೆದಿತ್ತು. ಆನ್ಸನ್ ತಿಳಿಸಿದ್ದನ್ನೆಲ್ಲ ಅಂಡರ್‌ಸನ್ ಪ್ರಕಟಿಸುತ್ತಿದ್ದರು. ಯಾವ ಬೆಲೆಯ ಗುರಿ ಇರಬೇಕು ಎಂಬುದನ್ನು ತಿಳಿಸಲಾಗುತ್ತಿತ್ತು ಎಂದು ಪೋರ್ಟಲ್ ತಿಳಿಸಿದೆ.

**AADYA HOLIDAYS DAVANAGERE**

**ಉತ್ತರ ಭಾರತ ಪ್ರವಾಸ**

ಶುಲ್ಕ: ರೂ. 25000/-

ಮಹಾ ಕುಂಭ ಮೇಳ ದರ್ಶನ ಪ್ರಯುಕ್ತ

9 ದಿನಗಳ ಉತ್ತರ ಭಾರತ ಪ್ರವಾಸ

ಸ್ಥಳಗಳು : ಕಾಶಿ - ಅಯೋಧ್ಯ - ಪ್ರಯಾಗ್ ರಾಜ್

ದಿನಾಂಕ : 03.02.2025 ರಿಂದ 12.02.2025

* 2+1 A/C Sleeper Coch Bus * ಡೀಲಕ್ಸ್ ರೂಂ

* ಊಟ ಮತ್ತು ಉಪಹಾರ * ಪ್ರವೇಶ ಶುಲ್ಕ ಒಳಗೊಂಡಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 99868 18205

## ನಾಳೆ ರಸ್ತೆ ಸುರಕ್ಷತಾ ಸಮಿತಿ ಸಭೆ

ದಾವಣಗೆರೆ, ಜ. 19 - ಜಿಲ್ಲಾಧಿಕಾರಿ ಹಾಗೂ ರಸ್ತೆ ಸುರಕ್ಷತಾ ಸಮಿತಿ ಅಧ್ಯಕ್ಷ ಜಿ.ಎಂ. ಗಂಗಾಧರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಾಡಿದ್ದು ದಿನಾಂಕ 21 ರಂದು ಬೆಳಗ್ಗೆ 11 ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ ನಡೆಯಲಿದೆ ಎಂದು ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್ ಹಾಗೂ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಸದಸ್ಯಕಾರ್ಯದರ್ಶಿ ತಿಳಿಸಿದ್ದಾರೆ.

**ಶ್ರೀ ಶ್ರೀಶೈಲ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ಆಡಳಿತ ಕಛೇರಿ : ನಂ. 473/1,2-ಎ, 16ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೆ.ಟಿ.ಜೆ. ನಗರ, ದಾವಣಗೆರೆ - 577 002 ಫೋನ್ : 99011 20124, 98447 36220

ಶಾಖೆ : ವಿದ್ಯಾನಗರ ದಾವಣಗೆರೆ-6. ಫೋನ್ : 99008 37356

**ಷೇರುದಾರರ ಗಮನಕ್ಕೆ**



ಸಂಘದ ಮುಂದಿನ ಐದು ವರ್ಷದ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರನ್ನು ಆಯ್ಕೆ ಮಾಡಲು **ಸಾರ್ವತ್ರಿಕ ಚುನಾವಣೆಯನ್ನು ದಿನಾಂಕ : 24-01-2025ರ ಶುಕ್ರವಾರ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಸಂಘದ ಆಡಳಿತ ಕಛೇರಿ ಆವರಣದಲ್ಲಿ ನಡೆಸಲಾಗುತ್ತದೆ.** ಚುನಾವಣೆಯಲ್ಲಿ ಮತ ನೀಡಲು ಸಂಘವು ನೀಡಿದ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ. ಕಾರಣ ಸಂಘದ ಗುರುತಿನ ಚೀಟಿ ಪಡೆಯದ **ಅರ್ಹ ಮತದಾರರು** ಸಂಘದ ಕೆಲಸದ ವೇಳೆಯಲ್ಲಿ ತಮ್ಮ ಪಾಸ್ ಪೋರ್ಟ್ ಸೈಜ್‌ನ ಫೋಟೋ, ಆಧಾರ್ ಕಾರ್ಡ್ ಪ್ರತಿಗಳನ್ನು ನೀಡಿ ತಮ್ಮ ಗುರುತಿನ ಚೀಟಿಯನ್ನು ಪಡೆಯಲು ಸೂಚಿಸಿದೆ.

ಮುಖ್ಯಕಾರ್ಯನಿರ್ವಾಹಕರು

**ಪುಟಾಣಿಗಳಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು**


ಮಾಜಿ ನಗರಸಭೆ ಉಪಾಧ್ಯಕ್ಷರಾದ ತರಕಾರಿ ಚಂದ್ರಪ್ಪ ಎಸ್.ಎನ್. ಇವರ ಮೊಮ್ಮಕ್ಕಳಾದ

**ಚಿ|| ರಿಷಿಕಾ ಎಸ್. ಮತ್ತು ಚಿ|| ನಿಹಾಲ್ ಎಸ್.**

ಇವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

ಶುಭಾಶಯ ಕೋರುವವರು : ಜಾಲಿನಗರ ಮತ್ತು ಸುರೇಶ್ ನಗರದ ಚಂದ್ರಪ್ಪ ಎಸ್.ಎನ್. ಇವರ ಅಭಿಮಾನಿ ಬಳಗ



ಹುಟ್ಟುಹಬ್ಬದ ಅಂಗವಾಗಿ ದಿ.20-1-2025ರ ಸೋಮವಾರ ಸಂಜೆ 7.30 ರಿಂದ ಭೋಜನ 8.30ಕ್ಕೆ ಮೋಹಿತ್ ಗಾರ್ಡನ್, ಎಂ.ಸಿ.ಸಿ. 'ಎ' ಬ್ಲಾಕ್, 10ನೇ ಕ್ರಾಸ್, ಸಾಯಿಬಾಬಾ ದೇವಸ್ಥಾನದ ಹತ್ತಿರ ಇಲ್ಲಿ ಹುಟ್ಟು ಹಬ್ಬದ ಕಾರ್ಯಕ್ರಮ ನೆರವೇರಲಿದ್ದು, ತಾವೆಲ್ಲರೂ ಕುಟುಂಬ ಸಮೇತರಾಗಿ ಆಗಮಿಸಿ, ಪುಟಾಣಿಗಳಿಗೆ ಶುಭ ಹಾರೈಸಬೇಕಾಗಿ ಚಂದ್ರಪ್ಪ ಅಭಿಮಾನಿ ಬಳಗ ಕೋರಿದೆ.

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

**ಕಬ್ಬಳ ಗ್ರಾಮ ಪಂಚಾಯಿತಿ ಕಾರ್ಯಾಲಯ, ಚನ್ನಗಿರಿ ತಾ. ದಾವಣಗೆರೆ ಜಿಲ್ಲೆ**

ಜಿ. ಸಂಖ್ಯೆ : ಗ್ರಾಪಂ/ಇ-ಟೆಂಡರ್ ಪ್ರಕಟಣೆ : 01/2024-25 ದಿನಾಂಕ : 16.01.2025

**ಟೆಂಡರ್ ಪ್ರಕಟಣೆ ಇ-ಪ್ರಕ್ಯೂರ್ ಮೆಂಟ್ ಮೂಲಕ**

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗ್ರಾಮ ಪಂಚಾಯಿತಿ ಕಬ್ಬಳ, ಚನ್ನಗಿರಿ ತಾಲ್ಲೂಕು ಇವರು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿನ 15ನೇ ಹಣಕಾಸು ಯೋಜನೆ 2024-25 ಸಾಲಿನ ನೋಂದಾಯಿತ ಅರ್ಹ ಹಾಗೂ ಇ-ಟೆಂಡರ್‌ಗಾಗಿ ಇ-ಪ್ರಕ್ಯೂರ್‌ಮೆಂಟ್ ಸೆಲ್‌ನಲ್ಲಿ ನೋಂದಾಯಿಸಲ್ಪಟ್ಟ ಸಾಮಗ್ರಿ ಸರಬರಾಜುದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Tender Document for E-procurement for Goods ನಮೂನೆಯಲ್ಲಿ ಆಹ್ವಾನಿಸಲಾಗಿದೆ.

| ವಿವರ | ಟೆಂಡರ್ ವೇಳಾ ಪಟ್ಟಿ |
|---|---|
| 1. ಕಬ್ಬಳ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣ (15ನೇ ಹಣಕಾಸು ಯೋಜನೆ 2024-25) RDPR/2024-25/BD/WORK_INDENT12263<br>2. ಕಬ್ಬಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸಾಮಗ್ರಿ ಖರೀದಿಗಾಗಿ ಕಾಯ್ದಿರಿಸಿದ ಮೊತ್ತ (15ನೇ ಹಣಕಾಸು ಯೋಜನೆ 2024-25) RDPR/2024-25/IND6865<br>3. ಕಬ್ಬಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಮೋಟಾರ್ ರಿವೈಂಡಿಂಗ್ (15ನೇ ಹಣಕಾಸು ಯೋಜನೆ 2024-25) RDPR/2024-25/IND6866<br>4. ಕಬ್ಬಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿ ದೀಪ ನಿರ್ವಹಣೆ (15ನೇ ಹಣಕಾಸು ಯೋಜನೆ 2024-25) RDPR/2024-25/IND6864 | 1. ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ-1 ಮತ್ತು ಅನುಬಂಧ - 2ನ್ನು) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ & ಸಮಯ : 28.01.2025 ಸಮಯ ಸಂಜೆ 5.30<br>2. ಇ-ಪೋರ್ಟಲ್‌ನಲ್ಲಿ ದಾಖಾಲಾತಿಗಳ / ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 30.01.2025 ಸಮಯ ಸಂಜೆ 5.30<br>3. ಇ-ಪೋರ್ಟಲ್‌ನಲ್ಲಿ ದಾಖಾಲಾತಿಗಳ / ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 31.01.2025 ಮತ್ತು ಸಮಯ : 5.30 PM |

ಈ ಟೆಂಡರ್ ಪ್ರಕ್ರಿಯೆಯು ತಾಂತ್ರಿಕ ತೊಂದರೆ ಮತ್ತು ಇತರೆ ವಿಷಯಗಳಿಂದ ರದ್ದತಿಯಾದರೆ ಮತ್ತೊಮ್ಮೆ ಪತ್ರಿಕೆ ಪ್ರಕಟಣೆ ಮಾಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ನೋಡಿಕೊಳ್ಳುವುದು. ಕಛೇರಿ ವೇಳೆಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

ಸಹಿ/-
**ಅಧ್ಯಕ್ಷರು**
ಗ್ರಾಮ ಪಂಚಾಯಿತಿ ಕಾರ್ಯಾಲಯ ಕಬ್ಬಳ

ಸಹಿ/-
**ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು**
ಗ್ರಾಮ ಪಂಚಾಯಿತಿ ಕಾರ್ಯಾಲಯ, ಕಬ್ಬಳ

# ಹೊಸ ಹುಂಡೈ ಕ್ರೆಟಾ ಎಲೆಕ್ಟ್ರಿಕ್ ಎಂಟ್ರಿ



ದಾವಣಗೆರೆ, ಜ.19- ಹುಂಡೈ ಮೋಟಾರ್ ಇಂಡಿಯಾ ಕಂಪನಿಯ ಬಹು ನಿರೀಕ್ಷಿತ ಹೊಸ ಹುಂಡೈ ಎಲೆಕ್ಟ್ರಿಕ್ ಕ್ರೆಟಾ ಕಾರನ್ನು ನಗರದ ಕೆ.ಜೆ. ಹುಂಡೈ ಶೋ ರೂಂ ನಲ್ಲಿ ಆರ್.ಟಿ.ಓ. ಅಧಿಕಾರಿ ಸಿ.ಎಸ್. ಪ್ರಮೂತೇಶ್ ಅವರು ಮಾರುಕಟ್ಟೆಗೆ ಪರಿಚಯಿಸಿದರು.

ಹೊಸ ಹುಂಡೈ ಕ್ರೆಟಾ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಕೆ.ಜೆ. ಹುಂಡೈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಜೆ.ಅಫಕ್ ರಜ್ವಿ ಅವರು, ಹುಂಡೈ ಎಲೆಕ್ಟ್ರಿಕ್ ಕ್ರೆಟಾ ಬ್ರ್ಯಾಂಡ್‌ನ ಯಶಸ್ಸು ಮತ್ತು ಪರಂಪರೆಯ ಮೇಲೆ ಹೊಸ ವಾಹನನ್ನು ಉತ್ಪಾದಿಸಲಾಗಿದೆ ಎಂದು ತಿಳಿಸಿದರು.

ಹುಂಡೈ ಜನಪ್ರಿಯ ಎಸ್‌ಯುವಿಗಳಲ್ಲಿ ಎಲೆಕ್ಟ್ರಿಕ್ ಕ್ರೆಟಾ ಕೂಡ ಒಂದು. 4,330 ಎಂಎಂ ಉದ್ದ, 1,790 ಎಂಎಂ ಅಗಲ ಮತ್ತು 1,635 ಎಂಎಂ ಎತ್ತರವನ್ನು ಹೊಸ ಹುಂಡೈ ಎಲೆಕ್ಟ್ರಿಕ್ ಕ್ರೆಟಾ ಹೊಂದಿದೆ. ಡ್ಯುಯಲ್-ಝೋನ್ ಕ್ಲೈಮೇಟ್ ಕಂಟ್ರೋಲ್, ವಿಹಂಗಮ ಸನ್‌ರೂಫ್, ವೆಂಟಿಲೇಟೆಡ್ ಸೀಟ್‌ಗಳು, ಸ್ಟೀರಿಂಗ್ ಮೌಂಟೆಡ್ ಕಂಟ್ರೋಲ್‌ಗಳು, ಮಲ್ಟಿ ಕಲರ್ ಅಂಬಿಯೆಂಟ್ ಲೈಟಿಂಗ್, ಆಪಲ್ ಕಾರ್ ಪ್ಲೇ/ ಅಂಡ್ರ್ಯಾಯ್ಡ್ ಆಟೋ, ಕನೆಕ್ಟೆಡ್ ಕಾರ್‌ಟೆಕ್, ವಾಯ್ಸ್ ಕಮಾಂಡ್‌ಗಳು ಸೇರಿ ಸಾಕಷ್ಟು ವೈಶಿಷ್ಟ್ಯಗಳನ್ನು ಇದು ಹೊಂದಿದೆ.

ಇನ್ನೂ ಸುರಕ್ಷತಾ ವೈಶಿಷ್ಟ್ಯಗಳಲ್ಲಿ ಆರು ಏರ್‌ಬ್ಯಾಗ್‌ಗಳು, 360 ಡಿಗ್ರಿ ಕ್ಯಾಮೆರಾ, ಎಲೆಕ್ಟ್ರಾನಿಕ್ ಸ್ಟೆಬಿಲಿಟಿ ಕಂಟ್ರೋಲ್, ಟ್ರಾಕ್ಷನ್ ಕಂಟ್ರೋಲ್ ಮತ್ತು ಟೈರ್ ಪ್ರೆಶರ್ ಮಾನಿಟರಿಂಗ್ ಸಿಸ್ಟಮ್ ಅನ್ನು ಇದು ಹೊಂದಿದೆ. ಆರಂಭಿಕ ಎಕ್ಸ್ ಶೋರೂಂ ಬೆಲೆ ರೂ. 17.99 ಲಕ್ಷದಿಂದ ಪ್ರಾರಂಭಗೊಂಡು ರೂ.24.00 ಲಕ್ಷದವರೆಗೆ ಅಂತ್ಯಗೊಳ್ಳುತ್ತದೆ. (ಚಾರ್ಜರ್‌ನೊಂದಿಗೆ)

ಸಮಾರಂಭದಲ್ಲಿ ಕೆ.ಜೆ.ಹುಂಡೈ ಸಂಸ್ಥೆಯ ಅಧ್ಯಕ್ಷರಾದ ಕೆ.ಜಾವೀದ್ ಸಾಬ್, ವ್ಯವಸ್ಥಾಪಕ ನಿರ್ದೇಶಕರಾದ ಕೆ.ಜೆ.ಅಫಕ್ ರಜ್ವಿ, ಸಂಸ್ಥೆಯ ನಿರ್ದೇಶಕರಾದ ಕೆ.ಜೆ.ಅಬ್ರಾರ್, ವ್ಯವಸ್ಥಾಪಕರಾದ ಶ್ರೀಮತಿ ಅಂಜಲಿ, ಮ್ಯಾನೇಜರ್ ಹಂಜಲ್, ಸೇಲ್ಸ್ ಎಕ್ಸಕ್ಯೂಟೀವ್ ಮಧುಸೂದನ್ ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಅನೇಕ ಗ್ರಾಹಕರು ಉಪಸ್ಥಿತರಿದ್ದರು.

# ಕನ್ನಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಲಕ್ಷ್ಮೀ ಶ್ರೀನಿವಾಸ್ ಗುರೂಜಿ ಭೇಟಿ



ದಾವಣಗೆರೆ, ಜ.19-ಬಾಲಾಜಿ ನಗರದ ಕುಂದುವಾಡ ಕೆರೆ ಬಳಿಯ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನಕ್ಕೆ ಬೆಂಗಳೂರಿನ ಶ್ರೀ ಲಕ್ಷ್ಮೀ ಶ್ರೀನಿವಾಸ್ ಗುರೂಜಿ ಅವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ದೇವಸ್ಥಾನದಲ್ಲಿ ಧನಾತ್ಮಕ ಶಕ್ತಿ ಇರುವುದಾಗಿ ಭಕ್ತರಿಗೆ ತಿಳಿಸಿದರು.

ಎಸ್.ಟಿ. ಕುಸುಮ ಶ್ರೇಷ್ಠಿ, ಎಸ್.ಎಸ್. ನಾರಾಯಣ ಮೂರ್ತಿ, ಮಧು, ಸುರೇಶ್, ಸುಧೀಂದ್ರ ಇತರರು ಈ ಸಂದರ್ಭದಲ್ಲಿ ಇದ್ದರು.

# ಲಯನ್ಸ್ ರಕ್ತನಿಧಿ ಕೇಂದ್ರಕ್ಕೆ ಹೊಸ ಆಂಬ್ಯುಲೆನ್ಸ್ ಲೋಕಾರ್ಪಣೆ

**ಮಲೇಬೆನ್ನೂರು**

ಮಲೇಬೆನ್ನೂರು, ಜ.19- ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಮಕರ ಸಂಕ್ರಾಂತಿ ಹಬ್ಬದ ವಿಶೇಷ ಆಚರಣೆ ಸಂದರ್ಭದಲ್ಲಿ ಲಯನ್ಸ್ ಜಿಲ್ಲೆಗೆ ಹೊಸದಾಗಿ ಖರೀದಿಸಿರುವ ಲಯನ್ಸ್ ರಕ್ತನಿಧಿ ಕೇಂದ್ರದ ಆಂಬ್ಯುಲೆನ್ಸ್ ವಾಹನವನ್ನು ಲಯನ್ಸ್ ಮಾಜಿ ಗೌವರ್ನರ್‌ಗಳಾದ ಡಾ. ಟಿ.ಬಸವರಾಜ್, ಡಾ. ಬಿ.ಎಸ್.ನಾಗಪ್ರಕಾಶ್ ಮತ್ತು ವೀರಭದ್ರೇಶ್ವರ ದೇವಸ್ಥಾನದ ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಬಿ. ಚಿದಾನಂದಪ್ಪ ಅವರು ಲೋಕಾರ್ಪಣೆ ಗೊಳಿಸಿರು.

ಲಯನ್ಸ್ ವಲಯಾಧ್ಯಕ್ಷ ಚಿಟ್ಟಕ್ಕಿ ನಾಗರಾಜ್, ಮಲೇಬೆನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷೆ ಶ್ರೀಮತಿ ಪಾರ್ವತಮ್ಮ ಇ.ಎಂ.ಮರುಳಸಿದ್ದಪ್ಪ, ಕಾರ್ಯದರ್ಶಿ ಶ್ರೀಮತಿ ರೂಪಾ ಪಾಟೀಲ್, ಮಾಜಿ ಅಧ್ಯಕ್ಷರಾದ ಓ.ಜಿ. ರುದ್ರಗೌಡ್ರು, ಡಾ. ಹೆಚ್.ಜೆ.ಚಂದ್ರಕಾಂತ್, ಎನ್.ಜಿ.ಬಸವನಗೌಡ್ರು, ಎನ್.ಜಿ.ಶಿವಾಜಿ ಪಾಟೀಲ್, ಸಿರಿಗೆರೆ ಸಿದ್ದಣ್ಣ ಮತ್ತು ಡಾ. ವರದಾಕಿರಣ್ ಹಾಗೂ ದಾವಣಗೆರೆ ಲಯನ್ಸ್ ರಕ್ತನಿಧಿ ಕೇಂದ್ರದ ಮೌನೇಶಾಚಾರ್ ಮತ್ತಿತರರು ಈ ವೇಳೆ ಹಾಜರಿದ್ದರು.



# ಸೈಫ್ ಇರಿತ : ಬಾಂಗ್ಲಾ ವ್ಯಕ್ತಿ ಬಂಧನ

ಮುಂಬೈ, ಜ. 19- ಬಾಲಿವುಡ್ ನಟ ಸೈಫ್ ಅಲಿ ಖಾನ್ ಚೂರಿ ಇರಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಂಗ್ಲಾದೇಶದ ವ್ಯಕ್ತಿಯೋರ್ವನನ್ನು ಬಂಧಿಸಲಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ ಬಾಂಗ್ಲಾದೇಶಿ ವ್ಯಕ್ತಿಗೆ ತಾನು ಬಾಲಿವುಡ್ ತಾರೆಯ ಮನೆಗೆ ನುಸುಳಿರುವುದು ಗೊತ್ತಿರಲಿಲ್ಲ. ಆತ ಕಳ್ಳತನದ ಉದ್ದೇಶದಿಂದ ಅಲ್ಲಿಗೆ ತೆರಳಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 30 ವರ್ಷದ ಶರೀಫುಲ್ ಇಸ್ಲಾಂ ಶಹಜಾದ್ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಬಂಧಿತನನ್ನು ಐದು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ. ಸೋಮವಾರ ಬೆಳಗಿನ ಜಾವ ಶಹಜಾದ್ ಥಾಣೆಯಲ್ಲಿರುವ ಕಾರ್ಮಿಕರ ಶಿಬಿರದಲ್ಲಿದ್ದಿದ್ದು ಪತ್ತೆಯಾಗಿತ್ತು. ನಂತರ ಆತನನ್ನು ಬಂಧಿಸಲಾಗಿತ್ತು. ಬಾಂಗ್ಲಾದೇಶದಿಂದ ಅಕ್ರಮ ವಾಗಿ ಭಾರತದಲ್ಲಿ ನುಸುಳಿದ್ದ ಶಹಜಾದ್, ನಂತರ ತನ್ನ ಹೆಸರನ್ನು ವಿಜಯ್ ದಾಸ್ ಎಂದು ಬದಲಿಸಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

# ನಾಳೆ ವೇಮನ, ಅಂಬಿಗರ ಚೌಡಯ್ಯ ಜಯಂತಿ ಆಚರಣೆ

ದಾವಣಗೆರೆ, ಜ.19- ಶ್ರೀ ಮಹಾಯೋಗಿ ವೇಮನ ಹಾಗೂ ಅಂಬಿಗರ ಚೌಡಯ್ಯ ಜಯಂತಿಯನ್ನು ನಾಡಿದ್ದು ದಿನಾಂಕ 21 ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಆಚರಿಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

# ಹಳೆ ಪಿಂಚಣಿಗಾಗಿ ಫೆ.7 ರಿಂದ ಅಹೋರಾತ್ರಿ ಧರಣಿ

ಬೆಂಗಳೂರು, ಜ.19- 'ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೆ ಒತ್ತಾಯಿಸಿ ಫೆ.7ರಿಂದ ಅಹೋರಾತ್ರಿ ಧರಣಿ ನಡೆಸುತ್ತೇವೆ' ಎಂದು ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ರಾಜ್ಯಾಧ್ಯಕ್ಷ ಶಾಂತಾರಾಮ ಅವರು ಹೇಳಿದ್ದಾರೆ.

'ಒಪಿಎಸ್ ಮರುಜಾರಿ ಮಾಡುತ್ತೇವೆ ಎಂದು 2024ರ ಜನವರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದರು. ಅಷ್ಟರಲ್ಲಿ ಕೇಂದ್ರ ಸರ್ಕಾರವು ಏಕೀಕೃತ ಪಿಂಚಣಿ ವ್ಯವಸ್ಥೆ (ಎನ್‌ಎಂಒಪಿಎಸ್) ಜಾರಿಗೆ ತಂದಿತು. ನಮ್ಮ ಸಂಘವು ಎನ್‌ಎಂಒಪಿಎಸ್ ಅನ್ನು ತಿರಸ್ಕರಿಸುತ್ತದೆ' ಎಂದಿದ್ದಾರೆ.

'ಒಪಿಎಸ್ ಮರುಜಾರಿಯನ್ನು ಈ ಸಾಲಿನ ಬಜೆಟ್‌ನಲ್ಲಿ ಘೋಷಿಸಬೇಕು.

ಇಲ್ಲದಿದ್ದಲ್ಲಿ ಒಪಿಎಸ್ ಹಕ್ಕೊತ್ತಾಯ ಧರಣಿ ನಡೆಸುತ್ತೇವೆ' ಎಂದು ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಸಂಗಣ್ಣನವರ ಹೇಳಿದ್ದಾರೆ.

# ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ವತಿಯಿಂದ ನಗರದ ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಇಂದಿನಿಂದ 26ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30 ರವರೆಗೆ ಓಶೋ ಧ್ಯಾನ ಶಿಬಿರ ನಡೆಯಲಿದೆ. ಆಸಕ್ತರು ಭಾಗವಹಿಸಬಹುದು ಎಂದು ಅರ್ಚನ (97385 72 318) ಪುಷ್ಪ (90367 19573) ತಿಳಿಸಿದ್ದಾರೆ.


## ಬೇಕಾಗಿದ್ದಾರೆ

ನಮ್ಮ ಶೋ ರೂಮ್‌ನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

**ಶಾಂತಲಾ** ದಿ ವೆಡ್ಡಿಂಗ್ ಮಾಲ್......

ಚಾಮರಾಜ್ ಪೇಟೆ, ದಾವಣಗೆರೆ. ಮೊ : 96861 95327


## ರವಿಶಂಕರ್ ಕೆ.ಎಂ. ನಿಧನ



ದಾವಣಗೆರೆಯ ಎಂಸಿಸಿ 'ಬಿ' ಬ್ಲಾಕ್, 9ನೇ ಮೇನ್, 2ನೇ ಕ್ರಾಸ್, ಎಸ್‌ಎಸ್‌ಎಂ ಹೌಸ್ ಎದುರುಗಡೆ, ಕೊಟ್ಟುರೇಶ್ವರ ನಿಲಯ ವಾಸಿ, ಹೆಸರಾಂತ ರವಿ ಬೆಣ್ಣೆ ದೋಸೆ ಹೋಟೆಲ್ ಮಾಲೀಕರು, ದಿ. ಮಹಾದೇವಪ್ಪ ರವರ ಮಗ

**ರವಿಶಂಕರ್ ಕೆ.ಎಂ.**

ಇವರು ದಿನಾಂಕ : 19.01.2025ರ ಭಾನುವಾರ ರಾತ್ರಿ 11:19 ಗಂಟೆಗೆ ನಿಧನರಾದರು. ಮೃತರಿಗೆ 63 ವರ್ಷ ವಯಸ್ಸಾಗಿತ್ತು, ಮೃತರ ಪತ್ನಿ, ಮೂವರು ಪುತ್ರಿಯರು, ಒರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 20.01.2025ರ ಸೋಮವಾರ ಸಂಜೆ 4 ಗಂಟೆಗೆ ಬೂದಾಳ್ ರೋಡ್ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


ssims SPARSH
CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು

ಪ್ರತೀ ಹದಿನೈದು ದಿನಗಳಿಗೊಮ್ಮೆ

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 23ನೇ ಜನವರಿ, 2025 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4 ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ



## ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಸಂಘ, ಆವರಗೆರೆ





## ಹೃದಯಪೂರ್ವಕ ಕೃತಜ್ಞತೆಗಳು

ದಿನಾಂಕ 19.1.2025ರಂದು ನಡೆದ ಆವರೆಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ
ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಆಯ್ಕೆಯಾಗಲು ಸಹಕರಿಸಿದ
ಆವರೆಗೆರೆ ಗ್ರಾಮಸ್ಥರಿಗೂ, ಅಧಿಖಾರಿ ವರ್ಗದವರಿಗೂ, ಕಾಂಗ್ರೆಸ್ ಮುಖಂಡರುಗಳಿಗೂ
ಹಾಗೂ ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ
ಹೃದಯಪೂರ್ವಕ ಕೃತಜ್ಞತೆಗಳು.



ಸಾಲಗಾರರಲ್ಲದ ಕ್ಷೇತ್ರದಿಂದ
ಸ್ಪರ್ಧಿಸಿ ಬಹುಮತದಿಂದ ವಿಜೇತರಾಗಲು
ಸಹಕರಿಸಿದ ಎಲ್ಲಾ ಮತದಾರರಿಗೂ ಕೃತಜ್ಞತೆಗಳು.



ನಾಗರತ್ನಮ್ಮ



ಮಂಜುನಾಥ ಡಿ.ಎಸ್


**ಅರುಣ್ ಕುಮಾರ್ ಬಿ.ಎಸ್.**



ಎ.ಎಸ್. ನಿಂಗಪ್ಪ



ಲಕ್ಷ್ಮಣ



ಕರಿರಂಗಪ್ಪ



ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ

## ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)

ದಾವಣಗೆರೆ - 577 004.







**80ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು**

79 ವಸಂತಗಳನ್ನು ಪೂರೈಸಿ,
80ನೇ ವಸಂತದ ಸಂಭ್ರಮದಲ್ಲಿರುವ
ಹೆಸರಾಂತ ಲೆಕ್ಕ ಪರಿಶೋಧಕರೂ,
ಕೈಗಾರಿಕೋದ್ಯಮಿಗಳೂ, ಶೈಕ್ಷಣಿಕ ತಜ್ಞರೂ,
ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ
ಸದಸ್ಯರೂ, ಅಖಿಲ ಭಾರತ ವೀರಶೈವ-ಲಿಂಗಾಯತ
ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷರೂ,
ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ
ಮ್ಯಾನೇಜಿಂಗ್ ಟ್ರಸ್ಟಿಗಳೂ ಆದ

**ಶ್ರೀ ಅಥಣಿ ಎಸ್. ವೀರಣ್ಣ**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.
ಶ್ರೀಯುತರಿಗೆ ಆಯುರಾರೋಗ್ಯ
ಭಾಗ್ಯ ಕರುಣಿಸಲಿ ಎಂದು
ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು : ಶ್ರೀ ಶ್ರೀ ಶ್ರೀ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರು

ಶ್ರೀ ಬಿ.ಸಿ. ಉಮಾಪತಿ, ಉಪಾಧ್ಯಕ್ಷರು ಶ್ರೀ ಎನ್.ಎ. ಮುರುಗೇಶ್, ಕಾರ್ಯದರ್ಶಿ

ಟ್ರಸ್ಟಿಗಳು

✦ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ✦ ಶ್ರೀ ಆರ್. ವೆಂಕಟರೆಡ್ಡಿ ✦ ಶ್ರೀ ಕೆ.ಜಿ. ಸುಗಂಧರಾಜ್
✦ ಶ್ರೀ ಬಿ.ಸಿ. ಶಿವಕುಮಾರ್ ✦ ಶ್ರೀ ಎಂ. ಮಹೇಶ್ಚಂದ್ರಬಾಬು ✦ ಶ್ರೀ ಎಸ್.ಕೆ. ವೀರಣ್ಣ
✦ ಶ್ರೀ ಐ.ಪಿ. ಏಕೋರಾಮಾರಾಧ್ಯ ✦ ಶ್ರೀ ಎ.ಕೆ. ಪ್ರಶಾಂತ್ ✦ ಶ್ರೀ ಎಂ.ಬಿ. ವೀರೇಂದ್ರ
✦ ಶ್ರೀ ಎ.ಬಿ. ಪ್ರಸಾದ್ ✦ ಡಾ. ಹೆಚ್.ಬಿ. ಮೋಹನ್

ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ (ರಿ.)ನ ಆಶ್ರಯದಲ್ಲಿ ನಡೆಯುವ ಗುಂಡಿ ನರ್ಸರಿ ಶಾಲೆ, ಪಿ.ಇ.ಎಸ್. ಪ್ರಾಥಮಿಕ ಶಾಲೆ, ಅಥಣಿ ಪ್ರೌಢಶಾಲೆ, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು, ಅಧ್ಯಾಪಕ ವೃಂದ, ಸಿಬ್ಬಂದಿ ವೃಂದ ಹಾಗೂ ವಿದ್ಯಾರ್ಥಿಗಳು-ವಿದ್ಯಾರ್ಥಿನಿಯರು


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas